# ಐಚ್ಛಿಕ ಕನ್ನಡ
# ಮೊದಲನೆ ಸೆಮಿಸ್ಟರ್



## ಪರಿವಿಡಿ

**I. ಸಾಹಿತ್ಯ ಚರಿತ್ರೆ; ಪರಿಕಲ್ಪನೆಗಳು ಮತ್ತು ಹಳಗನ್ನಡ ಸಾಹಿತ್ಯ ಚರಿತ್ರೆ**

ಅ. ಸಾಹಿತ್ಯ ಚರಿತ್ರೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷಿಕ ನೆಲೆಗಳು, ಸಾಹಿತ್ಯ ಪರಂಪರೆಗಳ ಸ್ವರೂಪ

ಆ. ಶಾಸನಗಳು–ಶಾಸ್ತ್ರಗ್ರಂಥಗಳು–ಸಂಸ್ಕೃತ, ದ್ರಾವಿಡ ಮತ್ತು ಪ್ರಾಕೃತ ಹಿನ್ನೆಲೆ–ಜನಪದ ಸಾಹಿತ್ಯದ ಹಿನ್ನೆಲೆ

ಇ. ಚಂಪೂ ಯುಗ : ಪಂಪನಿಂದ ಹತ್ತೊಂಬತ್ತನೆಯ ಶತಮಾನದವರೆಗೆ, ವಿಕಾಸ : ಶಾಸನ ಗದ್ಯ, ವಡ್ಡಾರಾಧನೆ

ಈ. ಹಳಗನ್ನಡ ಸಾಹಿತ್ಯದ ಮುಖ್ಯ ಆಕರಗಳು ಮತ್ತು ಆಕೃತಿಗಳು
ಭಾಷೆ, ಛಂದಸ್ಸು ಮತ್ತು ಕಾವ್ಯತತ್ವಗಳ ಸ್ಥೂಲ ಪರಿಚಯ

**II. ನಡುಗನ್ನಡ ಸಾಹಿತ್ಯ ಚರಿತ್ರೆ**

ಅ. ವಚನ, ಕೀರ್ತನೆ, ತತ್ವಪದ, ಜಾನಪದ

ಆ. ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಗದ್ಯ

**III. ಕಾವ್ಯಭಾಗಗಳು: ಚಂಪೂ ಮತ್ತು ರಗಳೆ**

ಅ. ಪಂಪ : ಶ್ರೀಮತಿ–ವಜ್ರಜಂಘರ ಪ್ರಸಂಗ ೦೧ – ೦೮

ಆ. ವಡ್ಡಾರಾಧನೆ : ಕಾರ್ತಿಕ ಋಷಿಯ ಕಥೆ ೦೯ – ೧೪

ಇ. ರಗಳೆ : ಬೇಡರ ಕಣ್ಣಪ್ಪ ರಗಳೆ ೧೫ – ೩೮

**IV. ನಡುಗನ್ನಡ ಕಾವ್ಯಭಾಗಗಳು : ವಚನ, ಷಟ್ಪದಿ, ಸಾಂಗತ್ಯ**

ಅ. ವಚನ, ಕೀರ್ತನೆ, ತತ್ವಪದ – ಆಶಯನಿಷ್ಠ ಆಯ್ಕೆ ೩೯ – ೫೨

ಆ. ರಾಘವಾಂಕ : ಬಿಲ್ಲೇಶ ಬೊಮ್ಮಯ್ಯನ ಕಥೆ ೫೩ – ೬೬

ಇ. ಕುಮಾರವ್ಯಾಸ : ಕಾವ್ಯತತ್ವವನ್ನು ಕುರಿತ ಷಟ್ಪದಿಗಳು ೬೭ – ೭೧

ಈ. ನಂಜುಂಡ : ಕಣ್ಗೆ ಕಡು ಚೆಲ್ವುವಡೆದಿರುತಿಹುದು ೭೨ – ೭೬

# III. ಕಾವ್ಯಭಾಗ

## ಅ. ಶ್ರೀಮತಿ–ವಜ್ರಜಂಘರ ಪ್ರಸಂಗ

– ಪಂಪ

**ಆಶಯ :**

ವಿವಾಹವೆನ್ನುವುದು ಸ್ವರ್ಗದಲ್ಲಿಯೇ ನಡೆದಿರುತ್ತದೆ. ಗಂಡ – ಹೆಂಡತಿಯರ ಸಂಬಂಧ ಜನ್ಮ ಜನ್ಮಾಂತರಗಳ ಸಂಬಂಧ, ಯಾವ ಹೆಣ್ಣಿಗೆ–ಯಾವ ಗಂಡೋ ಅವರೇ ಸೇರುವುದು. ಹೀಗೆ ಜಗತ್ತು ಮದುವೆಯ ಬಗ್ಗೆ ದಾಂಪತ್ಯದ ಬಗ್ಗೆ ನೂರಾರು ರೀತಿ ಆಲೋಚನೆ ಮಾಡುತ್ತದೆ. ಗಂಡು – ಹೆಣ್ಣು ಸಮಭಾವದಲ್ಲಿ ಬಾಳುವುದೇ ನೈತಿಕವಾಗಿ ಜೊತೆಯಾಗಿ ಕೂಡಿ ಬಾಳುವುದು ಈ ಮದುವೆಯ ಮುಖ್ಯ ಉದ್ದೇಶ ಎನ್ನಬಹುದು.

ಈ ರೀತಿಯ ದಾಂಪತ್ಯದಲ್ಲಿ ಹೊಂದಿಕೊಳ್ಳುವ ಜೊತೆಗೆ ನಿಜವಾದ ಪ್ರೀತಿ–ಪ್ರೇಮ ಇದ್ದರೆ ಅದೊಂದು ಸುಂದರ ಸ್ವರ್ಗ ಇದನ್ನೇ ಆದರ್ಶ ದಾಂಪತ್ಯ, ಆದರ್ಶ ದಂಪತಿಗಳು ಎನ್ನುತ್ತೇವೆ. ಪ್ರೇಮವು ತನ್ನ ಉತ್ಕಟತೆಯನ್ನು ಮೆರೆಯುತ್ತದೆ. ಇಂತಹ ಪ್ರೇಮಿಗಳ, ದಂಪತಿಗಳ ಅದ್ಭುತವಾದ ದಾಂಪತ್ಯವನ್ನು ಕಟ್ಟಿಕೊಡುವುದು ಪಂಪನ ಆದಿಪುರಾಣದ ಲಲಿತಾಂಗ ಸ್ವಯಂಪ್ರಭೆ, ವಜ್ರಜಂಘ – ಶ್ರೀಮತಿಯರ ಪ್ರಸಂಗ.

ತನ್ನ ಹೆಂಡತಿಯನ್ನು ಅತಿಯಾಗಿ ಪ್ರೀತಿಸುವ ಲಲಿತಾಂಗ ಮುಂದಿನ ಜನ್ಮದಲ್ಲಿಯೂ ಸ್ವಯಂಪ್ರಭೆಯೇ ತನ್ನ ಮಡದಿಯಾಗಬೇಕೆಂದು ಸಾವನ್ನಪ್ಪುತ್ತಾನೆ. ಮುಂದಿನ ಜನ್ಮದಲ್ಲಿ ವಜ್ರಜಂಘನಾಗುತ್ತಾನೆ – ಸ್ವಯಂಪ್ರಭೆ ಶ್ರೀಮತಿಯಾಗುತ್ತಾಳೆ. ಪಂಡಿತೆಯ ಸಹಾಯದಿಂದ ಈ ಜನ್ಮದಲ್ಲಿಯೂ ಪತಿ–ಪತ್ನಿಯರಾಗಿ ಬಾಳಿ ಪ್ರೀತಿ ಒಂದಿಷ್ಟು ಕಳೆಗುಂದದೆ, ಸೆಜ್ಜೆ ಮನೆಯಲ್ಲಿ ಒಂದಾಗಿ ಸಾಯುತ್ತಾರೆ. ಇವರಿಬ್ಬರ ದಾಂಪತ್ಯ ಪ್ರೇಮ ಉತ್ಕೃಷ್ಟದ ಹಂತವನ್ನು ತಲುಪಿ ಅಂತ್ಯವಾಗುತ್ತದೆ. ಕವಿ ಇಲ್ಲಿ ಜೀವನದ ನಶ್ವರತೆಯನ್ನು ಹೇಳಲು ಪ್ರಯತ್ನಪಟ್ಟರು ದಾಂಪತ್ಯದ ಸಾರ್ಥಕತೆಯು ನಮ್ಮನ್ನು ಹೆಚ್ಚಾಗಿ ಕಾಡುತ್ತದೆ.



ಪಂಪನ ಆದಿಪುರಾಣದ ಈ ಪ್ರಸಂಗಗಳು ಎಲ್ಲರ ಎದೆಯನ್ನು ತಟ್ಟಿ ಕಂಪನ್ನು ತರುವುದಂತೂ ಸುಳ್ಳಲ್ಲ. 'ನೆಗಟ್ದು ಆದಿಪುರಾಣದೊಳಡಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಕವಿ ಹೇಳುತ್ತಾನೆ. ಜೈನ ತತ್ತ್ವಗಳ ಜೊತೆಯಲ್ಲಿಯೇ ಜೀವನ ತತ್ತ್ವವನ್ನು ಹೇಳುವ ಈ ವಜ್ರಜಂಘ–ಶ್ರೀಮತಿಯ ಪ್ರಸಂಗ ಬಹಳ ವಿಶೇಷ ವಿಶಿಷ್ಟ ಎನ್ನಬಹುದು.

ಉತ್ಕಳಖೇಟವೆಂಬುದು ಪೊೞಲ್ ನಯದಿಂದನಾಳ್ವುದಗ್ರಭೂ
ಭೃತ್ಪತಿ ವಜ್ರಬಾಹುನೃಪನಾ ನೃಪನಗ್ಗದುದಗ್ರಕಾಂತೆ ನೀ
ಲೋತ್ಪಲಲೋಲಲೋಚನೆ ವಸುಂಧರೆಯಂತವರ್ಗಗ್ರಸೂನು ಸಂ
ಪತ್ಪತಿ ವಜ್ರಜಂಘನೆ ತಲ್ಲಲಿತಾಂಗನೆ ಬಂದು ಪುಟ್ಟಿದಂ

ಆ ದಿವಿಜೇಂದ್ರ ಲೋಕದಿರವುಂ ಪೆಸರುಂ ತನಗಿಲ್ಲಿ ಬಂದು ಬೇ
ಱೂದುದೆ ಭೇದಮನಂಗರುಚಿ ರೂಪಿನ ಪೆಂಪಿನ ಗಾಡಿಯೇೞ್ಗೆ ಮೇ
ಲಾದ ವಿಳಾಸದೊಡ್ಡವಿನಿತುಂ ದಿವದಿಂದೊಡವಂದುವೆಂಬನಿ
ತ್ತಾದುದು ರೂಪು ಜವ್ವನಮೊತ್ತರಿಸುತ್ತಿರೆ ವಜ್ರಜಂಘನಾ

ಎನಿತೆನಿತೆಂತು ಯೌವನಮನಂಗವಿಕಾರವಿನೋದಿಯಕ್ಕುಮಂ
ತನಿತನಿತೀ ಮಹೀತಳದ ಭಾರಮನೊಲ್ಲದೆ ತತ್ಸ್ವಯಂಪ್ರಭಾ
ನನ ಸಕಳೇಂದುಬಿಂಬರಮಣೀಯಮನಕ್ಷಯ ಕಲ್ಪವೃಕ್ಷನಂ
ದನವನರಮ್ಯಮಂ ನೆನೆದು ದೂಱಿಸಿದಂ ಸುರಲೋಕ ಸೌಖ್ಯಮಂ

ವ॥ ಅಂತು ಗಗನತಳಕುಸುಮಮನೆ ಬಯಸಿ ಮರುಳ್ಗೊಂಡ ಮರುಳಂತೆ ದೇವಲೋಕದೊಳಿನಿತಾನುಂ ಕಾಲಮನುಭವಿಸಿದನುಭವಕ್ಕೆ ಮೊದಲಿಗೆ ಯೆನಿಸಿದಾ ಸ್ವಯಂಪ್ರಭೆಯೆಂ ನೆನೆನೆನೆದು

ಕುಡುಮಿಂಚಂ ಮಸೆದನ್ನರಪ್ಪ ಪಲರೊಳ್ವೆಂಡಿರ್ ಮನಂಗೊಂಡುಬಂ
ದೊಡಮಾ ರಾಜಕುಮಾರನೊಲ್ಲನೆ ದಳನ್ನಂದಾರಿಕಾ ಮಾಲೆಯೊಳ್
ಕಡುಗಂಪಂ ಸವಿದೊಂದು ತುಂಬಿ ಪಸಿವಿಂ ಮೆಳ್ಪಟ್ಟು ಬಂಡುಣ್ಣದಿ
ರ್ಪೊಡಮಿರ್ಕುಂ ಬಟಿಕೆಂತು ಮನ್ಯಕುಸುಮಾಮೋದಕ್ಕೆ ಮೆಯ್ದುರ್ಕುಮೆ

ವ॥ ಅನ್ನೆಗಮೀಶಾನಕಲ್ಪದೊಳಾ ಶ್ರೀಪ್ರಭವಿಮಾನದೊಳ್,

ಅಲಕಂ ಮಂದಾರ ಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ
ತಿಲಕಾಳಂಕಾರಶೂನ್ಯಂ ಘನಕುಚಯುಗಳಂ ಹಾರಶೂನ್ಯಂ ನಿತಂಬಂ
ಕಲಕಾಂಚೀದಾಮ ಶೂನ್ಯ ಚರಣಯುಗಳಮಂ ನೂಪುರಾಳಾಪಶೂನ್ಯಂ
ಲಲಿತಾಂಗಂ ಪೋದಾಡಾಯ್ತಾಕೆಗೆ ದಿವಮನಿತುಂ ನಿರ್ಜ[ನಾ]ರಣ್ಯ ಶೂನ್ಯಂ

ವ॥ ಅಂತಾ ಸ್ವಯಂಪ್ರಭಾಮಹಾದೇವಿ ನಿಜಪ್ರಾಣವಲ್ಲಭವಿಯೋಗ ವಿಧುರೆಯಾಗಿ

ಮುರಿದೆಟೆದುಯ್ಯೆ ನಿನ್ನನಿರದಂತಕನಾಂ ನಡೆ ನೋಡೆ ನೋಡೆ ನೀಂ
ಕರಗಿದೆಯೆಂತುಮೆನ್ನ ಸುಶರೀರದೊಳಿರ್ದುದು ಜೀವಮೀಯೊಡಲ್
ಕರಗಿದುದಿಲ್ಲದೆನ್ನ ಬಸಮಲ್ತೊಡಲಿಂದೆಮ ಶೋಕದೊಳ್ ಮನಂ
ಕರಗಿದುದೆಯ್ದೆ ವಾರದಿರೆಯಿರ್ದೆಡೆಯಿಂ ಲಲಿತಾಂಗವಲ್ಲಭಾ

ಮದನನ ಕೈದುವೆಲ್ಲಿದಗನಂಗನ ಕೈಪೊಡೆಯಲ್ಲಿದಂ ವಿಳಾ
ಸದ ಕಣಿಯೆಲ್ಲಿದಂ ಚದುರ ಪುಟ್ಟಿದನೆಲ್ಲಿದನೆಲ್ಲಿದಂ ವಿನೋ
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಚೆಯಾಣ್ಮನೆ
ಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ

ವ॥ ಎಂದು ನಿಜಪ್ರಾಣವಲ್ಲಭವಿಯೋಗ ಶೋಕೋದ್ರೇಕ ವ್ಯಾಕುಳೆಯಾಗಿರ್ದ ತತ್ಸ್ವಯಂ ಪ್ರಭಾದೇವಿಯ ಸಮೀಪಕ್ಕೆ ಮಹತ್ತರದೇವಿಯರ್ ಬಂದು.

ಮುಂ ಪಿಂತಂಬುದಿದಲ್ತೆ ನಿ
ಳಿಂಪಯುಗಕ್ಕೆಲ್ಲಮಿಂತು ಬಾಯಟೆವುದೆ ಚೀಃ ॥
ಗಾಂಪು ಬಗೆಗೊಂಡು ಜಿನಪತಿ
ಯಂ ಪೂಜಿಸು ಪಡೆವೆಯಿನಿಯನಂ ಮಱುಭವದೊಳ್

ವ॥ ಅಂತು ನಿಶಾಂತಕಾರಕಾಕಾರದಿಂದದೃಶ್ಯರೂಪಿಯಾಗಿ ಜಂಬೂದ್ವೀಪದ ಪೂರ್ವ ವಿದೇಹದ ಪುಂಡರೀಕಿಣಿಯೆಂಬ ಪೊೞಲನಾಳ್ವ ವಜ್ರದಂತಭೂಪತಿಗಮಾತನ ಮನೋರಥಜನ್ಮಭೂಮಿಯೆನಿಸಿದ ಲಕ್ಷ್ಮೀಮತಿ ಮಹಾದೇವಿಗಂ



ಕಾಮನ ಮಂತ್ರದೇವತೆಯೊ ಕಾಮನ ವಿದ್ಯೆಯೊ ಬದ್ಧರಂ ಗೆಲಲ್
ಕಾಮನ ನಿಚ್ಚಮರ್ಚಿಸುವ ಕೈದುವೊ ಕಾಮನ ಮೋಹಪಾಶಮೋ
ಕಾಮನ ಕಾಣ್ಬ ಕೈಪಿಡಿಯೊ ವಿಸ್ಮಯಮಾದಪುದೆಂಬಿನಂ ಮಗಳ್
ಶ್ರೀಮತಿಯೆಂಬಳಾಗಿ ನವಯೌವನಲಕ್ಷ್ಮಿಯನೆಯ್ದೆ ತಾಳ್ದಿದಳ್

[ಯೌವನವಂತೆಯಾದ ಶ್ರೀಮತಿಯು ತನ್ನ ತಂದೆಗೆ ಈ ರೀತಿ ಪ್ರಶ್ನೆ ಕೇಳುತ್ತಾಳೆ]

ವ॥ ಇನ್ನೊಂದೆ ಮದೀಯಪ್ರಾಣವಲ್ಲಭನಪ್ಪ ಲಲಿತಾಂಗದೇವನೆಲ್ಲಿ ಪುಟ್ಟಿದನೆಂಬುದೆನಗಿದೆ ಸಂದೆಯಮೆನಗದಂ ಬೆಸಿಸಿಮೆಂಬುದುಂ ಆಂ ನಿಮ್ಮಿಂ ಮುನ್ನಮಚ್ಯುತಕಲ್ಪದಿಂ ಪರಿಚ್ಯುತನೆನಾಗಿ ಬಂದಿಲ್ಲಿಯುಶೋಧರ ಮಹೀಭುಜಂಗಂ ತದ್ಭವನಿವತೆ ವಸುಮತಿಗಂ ವಜ್ರದಂತನಾದೆಂ: ನಿನ್ನ ದೇವನುಮಪ್ಪ ಲಲಿತಾಂಗದೇವನುಮೀಶಾನಕಲ್ಪದಿಂ ಬಂದುತ್ಪಳಖೇಟಮನಾಳ್ವ ಎನ್ನ ಮೆಯ್ದುನನಪ್ಪ ವಜ್ರಬಾಹುಗೆಮೆನ್ನತಂಗೆಯಪ್ಪ ವಸುಂಧರೆಗಂ ವಜ್ರಜಂಘನೆಂಬ ತನುಜನಾದಂ; ಆ ಸ್ವಯಂಪ್ರಭೆಯೆ ನೀನುಮೆನಗೀಗಳ್ ಶ್ರೀಮತಿಯಾಗಿಪುಟ್ಟಿದೌ

ಭವದಿಂದಂ ಭವದೊಳ್ ತಗಳ್ದು ಪರಮಸ್ನೇಹಂಗಳಿತೀಗಳಿ
ಲ್ಲಿವರಂ ಬಂದುವು ನಿನ್ನ ನಲ್ಲನೆ ಗಡಂ ಮದ್ಭಾಗಿನೇಯಂ ಮಹೋ
ತ್ಸವದಿಂ ಬಂದಪನಿಂದೆ ಪಂಡಿತೆಯುಮಾ ವೃತ್ತಾಂತದೊಳ್ ಪುಟ್ಟಿದು
ತ್ಸವಮಂಮಾಣದೆ ಕೊಂಡುಬರ್ಕುಮದುವಂ ಕೇಳ್ವೌಮಹೋತ್ಸಾಹದಿಂ

ವ॥ ಎಂದು ಕನ್ಯಾರತ್ನಮಂ ಕನ್ಯಾಂತಪುರಕ್ಕೆ ಪೋಗಲ್ವೇೞ್ದು ವಜ್ರದಂತ ನಾಸ್ಥಾನದಿಂದೆರ್ದುಪೋದಂ. ಅನ್ನೆಗಮಿತ್ತಲುಮಖಂಡಿತಮತಿ ಪಂಡಿತೆಯುಂ ತನ್ನ ಪೂಣ್ದುಪೋದ ಕಜ್ಜಮಂ ಸಾಧ್ಯಂ ಮಾಡಿ ಬಂದು ಸಸಂಭ್ರಮದಿಂ ವಿಭ್ರಮವಿಳಾಸವತಿಯಂ ಶ್ರೀಮತಿಯಂ ಕಂಡು
(ಚಿತ್ರಪಟವನ್ನು ಕಂಡ ವಜ್ರಜಂಘನ ಪ್ರತಿಕ್ರಿಯೆ ಮುಂದಿನಂತಿದೆ)

ಎಲೇ ಬಗೆದೆನೀಗಳೀ ಬರೆದ ಕಲ್ಪಮೀಶಾನಮೀ
ಚಲುಲ್ಲಳಿತಕೇತನಂ ಸುರವಿಮಾನಮಾ ಶ್ರೀಪ್ರಭಂ
ಸಲೀವೃದನಾರವಿಂದಮಿದು ದೇವವೃಂದಂ ಲಸ
ದ್ವಿವಲಾಸದರಹಾಸರಮ್ಯಮಿದು ದಿವ್ಯಕಾಂತಾಜನಂ

ಇದಂದು ಲಲಿತಾಂಗದೇವನೆನೆ ಸಂದಮದ್ರೂಪಮೀ
ಮದಾಲಸವಿಲೋಲಲೋಚನೆ ದಲೆನ್ನ ಮಾದೇವಿ ತ
ಪ್ಪದೀ ಲಲನೆ ತತ್ಸವಂಪ್ರಭೆಯೇಂ ನೋೞ್ಪೊಡೀ ಚಿತ್ರಮಿಂ
ತಿದಾಕೆಯದೆ ಬಲ್ಮೆಪೇೞ್ ಪೆಱರ್ಗಮಿಂತುಟೊಂದಕ್ಕುಮೇ

ಪ್ರಿಯದಯಿತೆಯನಾಂ ನಿನಗೆಂ
ಬೆಯೆಂದು ನೀನೆನ್ನನಿಂತಗಲ್ದಿರ್ಪುದೆ ವಿ
ಸ್ಮಯಮಂ ಮಾಡಿದಪುದು ಹಾ
ಸ್ವಯಂಪ್ರಭೇ ಎಂದು ಮೂರ್ಛೆವೋಪುದುಮಾಗಳ್

ಪರಿಜನಮನಿತುಂ ತುರಿಪದೆ
ಪರಿತಂದಿನ್ನೇವೆವೆಂದು ಕಪ್ಪುರದ ರಜಂ
ಬೊರೆದ ಕದಕಾಂಬುವಂ ತಳಿ
ದರವುರನೆಟ್ಟಿಱಿಸೆ ಮೂರ್ಛೆತಿಳಿದು ಕುಮಾರಂ

ನಿನಗಾನೇನೆಂಬೆನೆನ್ನಿರ್ದಿರವನಱಿದು ನೀನಿರ್ದೆಯಿನ್ನಾಕೆಗಂ ನೀಂ
ಮನದನ್ನೈ ತೋಱು ನಿನ್ನೀ ಪಟಮನೆನಗದಂ ನೋಡಿ ಮತ್ಕಾಂತೆಯಂ ಕಾ
ಣ್ಬೆನಗಂ ಸೈರಿಪ್ಪೆನೆನ್ನೀ ಬರೆದ ಪಟಮುಮಂಕೊಂಡು ಪೋಗಾಕೆಗೆಂದಿಂ
ತಿನಿತುಂ ವೃತ್ತಾಂತಮಂ ನಿನ್ನನಿಯನಱಿಯೆ ಪೇೞ್ವಿಟ್ಟಿದಂ ಲೋಲನೇತ್ರೇ

ವ॥ ಎಂದು ಮನಃಪ್ರಿಯತಮನ ಬರೆದ ಸಾಭಿಜ್ಞಾನಪಟಮನೀವುದುಮಾಕೆಯುಮದಂ ನಿಮಿರ್ಚಿ ನೋಡಿ

ಅವಿನಾಣಮನಿತುಮೆರ್ದೆವುಗೆ
ಕಿವಿವುಗೆ ಪಂಡಿತೆಗೆ ನುಡಿದ ನಲ್ಲನ ನುಡಿ ತ
ಳ್ತವಿರಳರೋಮಾಂಚದೆ ಮಾ
ಧವಸಮಯದೊಳಲರ್ದ ಚೂತಲತೆಯೆನೆ ಪೋಲ್ತಳ್

**ನಂತರ ಅವರ ವಿವಾಹವು ಬಹಳ ವಿಜೃಂಭಣೆಯಿಂದ ನೆರವೇರುತ್ತದೆ.**



ಪರಿವ ಕಟಾಕ್ಷಂಗಳನೋ
ಸರಿಸುತ್ತುಂ ನಿಮಿರ್ವ ಸುಯ್ಗಳಂ ಕುಸಿಯುತ್ತುಂ
ಶರಪಾಶಂಗಳ ನಡುವಣ
ಹರಿಣಿಯವೋಲ್ ಮನದೊಳಾಗಳಾಕುಳೆಯಾದಳ್

ವ॥ ಆಗಳ್ ವಜ್ರಜಂಘಂ

ಪುಳಕಪ್ರೋದ್ಧೇದಘರ್ಮೋದಕವಿಸರಮನೊತ್ತಂಬದಿಂ ತಾಗೆಯುಂ ನಿ
ಶ್ಚಳಧೈರ್ಯವ್ಯಾಜತಿರ್ಯಗ್ವಳನತರಳಿತಂ ದೃಷ್ಟಿ ಪೇೞ್ದಿತ್ತು ನಿರ್ವ್ಯಾ
ಕುಳಮಾಗಳ್ ರಾಜಪುತ್ರೀಸ್ಮಿತಮಧುಮಧುರಾಪಾಂಗಚೈತ್ರಾಂಗಜಾಸ್ತ್ರಂ
ಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್ ದೃಷ್ಟಿಯಂ ಕಾವನಾವಂ

ವ॥ ಅಂತಭಿನವಸಂಗಸಮುತ್ಪನ್ನಸಾಧ್ವಸರಸರಮಣೀಯತರ ಮುಗ್ಧವಧೂವದನವಿಲೋಕನ ಸುಖಮನನುಭವಿಸಿ.

ಇನಿವಿರಿದೊಂದು ಮೇಳಮುಮೊಡಂಬಡುವಟ್ಟಿಱುಮೆನ್ನ ನಿನ್ನ
ಮುನ್ನಿನ ಭವದೊಂದು ಕೂರ್ಮೆಯೊಳ್ ಕೂಡಿದುದೀ ಭವದಿಂದಮಾದ ವಾ
ಸನೆ ಮಱುಮೆಯ್ಗಮಕ್ಕುಮದಱಿಂದೆನಗಂ ನಿನಗಂ ಸಮಂತ ಮು
ನ್ನಿನ ಭವಮೀ ಭವಂ ಮಱುಭವಂ ಸಫಲಂ ಮೃಗಲೋಲಲೋಚನೇ

ದಿವಿಜೇಂದ್ರಂವಾಸದೊಳ್ ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದೀ
ಭವದೊಳ್ ಬಂದಿಲ್ಲಿ ಜಾತಿಸ್ಮರರೆನೆ ನೆರೆದೋರೊರ್ವರೊಳ್ ಮತ್ತ ಮತ್ತ್ಯ
ತ್ಸವದಿಂ ಮರ್ತ್ಯಭೋಗಂಗಳನನುಭವಿಸಲ್ ನೋಂತರಿಂತೀಗಳಿಂತುಂ
ತವರಂತೇಂ ಪುಣ್ಯಮಂ ಪೂಜಿಸಿದರೊ ಪಿರಿದುಂ ಶ್ರೀಮತಿವಜ್ರಜಂಘರ್

ರಮಣೀಯಂ ಪುಷ್ಪಿತಲತೆ
ಕಮನೀಯಮುಮಾಯ್ತು ಕಾಯ್ತುದೆನೆ ಭುವನಮನು
ಕ್ರಮದಿಂ ನಾಲ್ವತ್ತೊಂಬ
ತ್ತಮಳ್ಗಳ್ ಪುಟ್ಟಿದುವು ಗುಣದಮಳ್ ಪುಟ್ಟಿದವೋಲ್

ಮೊದಲೊಳ್ ನೀಳ್ದು ಪೊದಟ್ದು ಪರ್ಬಿ ಪದಪಂ ಕೈಗೊಂಡು ಮಂದೈಸಿಮಾ
ಣದೆ ತನ್ನಂದದೊಳೇಟ್ಗಿಗುಂದದೆ ನಿರುದ್ಭೋಚ್ಚ್ವಾಸಮಪ್ಪನ್ನೆಗಂ
ಪುದಿದಾ ದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ
ದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೊಲ್

ಬಿಡದೆ ಪೊಗೆ ಸುತ್ತೆ ತೋಳಂ
ಸಡಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡೆಗಳೆದರೋಪರೋಪರೋ
ಳೊಡಸಾಯಲ್ಪಡೆದರಿನ್ನವೇಂ ಸೈಪೊಳವೇ

ಭೋಗಾಂಗ ಮಾಗಿಯುಂ ಕೃ
ಷ್ಣಾಗರುಧೂಪಂ ಮುಸಂಕಿ ಕೊಂದಿಕ್ಕಿದುದಾ
ಭೋಗಿಗಳನಿಂತು ಸಂಸೃತಿ
ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್

ಅನಿತು ಸುಖದನಿತು ಭೋಗದ
ಮನುಜಯುಗಂ ನೋಡೆನೋಡೆ ತತ್‌ಕ್ಷಣದೊಳ್ ತಾ
ನಿನಿತೊಂದು ದೆಸೆಯನೆಯ್ದಿದು
ದೆನೆ ಜಡರೇನೆಂದು ನಂಬುವರ್ ಸಂಸೃತಿಯಂ

ಬೆಳಗುವ ಸೊಡರ್ಗುಡಿ ಕಿಡೆ ಮನೆ
ಯೊಳಗೆ ತಮಂ ಪರ್ಬುವಂತೆ ಜೀವಂ ತನುವಿಂ
ತಳರಲೊಡಂ ವಿಚ್ಛಾಯತೆ
ಗೊಳಗಾದವು ತೊಳಗುವವರ ಸುಂದರತನುಗಳ್



## ಕವಿ ಪರಿಚಯ

**ಪಂಪ :** ಪಂಪ ಕವಿಯು ಕ್ರಿಶ ೯೦೩ ರಲ್ಲಿ ಜನಿಸಿದನು. ಇವನ ಪೂರ್ವಿಕರು ವೆಂಗಿಮಂಡಲದ 'ವೆಂಗಿಪಟು'ವಿನವರು. ತಂದೆ ಬೀಮಪ್ಪಯ್ಯ ತಾಯಿ ಅಬ್ಬಲಬ್ಬೆ. ಪಂಪ ರಾಷ್ಟ್ರಕೂಟರ ಸಾಮಂತ ಎರಡನೆಯ ಅರಿಕೇಸರಿಯ ಆಸ್ಥಾನವನ್ನು ಸೇರಿ ಕಾವ್ಯವನ್ನು ರಚನೆ ಮಾಡಿ ಅವನ ಗೌರವಕ್ಕೆ ಪಾತ್ರನಾದನು.

ಇವನ ಎರಡು ಕೃತಿಗಳು 'ಆದಿಪುರಾಣ' ಮತ್ತು ವಿಕ್ರಮಾರ್ಜುನ ವಿಜಯ. ಆದಿಪುರಾಣವನ್ನು ಮೂರುತಿಂಗಳಲ್ಲಿ ಬರೆದು ಮುಗಿಸಿದಂತೆ ಹೇಳಿಕೊಂಡಿದ್ದಾನೆ. ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಬರೆದಿರುವ ಪೂರ್ವಪುರಾಣ ಇದಕ್ಕೆ ಮೂಲ ಆಕರ. ಇದು ಹದಿನಾರು ಆಶ್ವಾಸಗಳನ್ನು ಒಳಗೊಂಡಿದೆ.

**ಕಠಿಣ ಪದಗಳ ಅರ್ಥ :**

ಸೂನು–ಮಗ, ಗಾಡಿ–ಸೌಂದರ್ಯ, ದಿವ–ಸ್ವರ್ಗ, ಮಂದರಿಕಾಮಾಲೆ–ಮಂದಾರ ಪುಷ್ಪಮಾಲೆ, ಅಲಕ–ಮುಂಗುರುಳು, ಕದಪು–ಕೆನ್ನೆ, ಲಲಾಟ–ಹಣೆ, ನೂಪುರ–ಕಾಲಂದುಗೆ, ಕೈದು–ಆಯುಧ, ಕೈಪೊಡೆ–ಬಾಣ, ಕೂರ್ಮೆ–ಪ್ರೀತಿ, ಸೆಜ್ಜೆವಳ–ಮಲಗುವ ಮನೆಯ ಅಧಿಕಾರಿ, ಸಂಸ್ಕೃತಿ–ಸಂಸಾರ.

**ಪ್ರಶ್ನೆಗಳು :**

೧. ಜೈನ ತತ್ತ್ವದಡಿಯಲ್ಲಿಯೇ ಜೀವನ ತತ್ವವನ್ನು ಹೇಳುವ ಪಂಪನ ಕ್ರಿಯಾಶೀಲತೆಯನ್ನು ಈ ಪ್ರಸಂಗದ ಮೂಲಕ ವಿವರಿಸಿ.

೨. ಪತಿ–ಪತ್ನಿಯರ ಸಂಬಂಧ ಜನ್ಮಜನ್ಮಾಂತರಗಳ ಸಂಬಂಧವಾಗಿ ಮೂಡಿಬಂದಿರುವ ಬಗೆಯನ್ನು ವಿವರಿಸಿ.

೩. ವಜ್ರಜಂಘ – ಶ್ರೀಮತಿಯರು ದಾಂಪತ್ಯದ ಔನ್ನತ್ಯವನ್ನು ಸಾಧಿಸುವ ಪರಿಯನ್ನು ಚರ್ಚಿಸಿ.

೪. ಸಂಸಾರದ ನಶ್ವರತೆಯನ್ನು ಹೇಳುತ್ತಲೆ ಕವಿ ಅದರ ಸಾರ್ಥಕತೆಯನ್ನು ತೋರುವ ಬಗೆಯನ್ನು ವಿವರಿಸಿ.

*

# ೬. ಕಾರ್ತಿಕ ಋಷಿಯ ಕಥೆ

– ಶಿವಕೋಟ್ಯಾಚಾರ್ಯ

**ಆಶಯ :**

ಹೆಣ್ಣು, ಹೊನ್ನು, ಮಣ್ಣು ಈ ಲೋಕದ ಆಶಯಗಳು. ಇವುಗಳನ್ನು ಪಡೆಯುವುದಕ್ಕಾಗಿ ಜಗತ್ತು ಏನನ್ನೂ ಮಾಡಲು ಸಿದ್ಧವಿರುತ್ತದೆ. ಇವುಗಳ ಲಾಲಸೆಯಿಂದಲೇ ಆಧುನಿಕ ಜಗತ್ತು ಎಂದೂ ಕಾಣಲಾರದ, ನಿವಾರಿಸಲಾರದ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಧಿಕಾರದಿಂದ ಏನನ್ನಾದರೂ ಸಾಧಿಸಬಹುದೆಂಬ ಅಹಂ ಎಲ್ಲರನ್ನೂ ಕಾಡುತ್ತಿದೆ. ಇಂತಹ ನಿವಾರಿಸಲಾಗದ ಸಮಸ್ಯೆಗಳಲ್ಲಿ ಒಂದು ಹೆಣ್ಣು. ಹೆಣ್ಣಿನ ಮೇಲಿನ ದೌರ್ಜನ್ಯ, ಅತ್ಯಾಚಾರ ನಿಲ್ಲಲಾರದ ಪಿಡುಗಾಗಿದೆ. ಮನೆಯ ಹೊರಗಡೆ, ಒಳಗಡೆಯೂ ಆಕೆ ಅತ್ಯಾಚಾರಕ್ಕೀಡಾಗುವ ಸಾಧ್ಯತೆಗಳೇ ಇಂದು ಹೆಚ್ಚಾಗುತ್ತಿದೆ. ಈ ರೀತಿಯ ಸಮಸ್ಯೆ ಕೇವಲ ಇಂದಿನ ಸಮಸ್ಯೆಯಾ? ಎಂದು ಯೋಚಿಸಿದರೆ ಇಲ್ಲಾ? ಇದು ಎಲ್ಲಾ ಕಾಲದ ಸಮಸ್ಯೆಯೂ ಹೌದು ಎನ್ನಬೇಕಾಗುತ್ತದೆ. ಅಂದಿನ ಸಮಾಜದ ರಾಜತ್ವ, ಅಧಿಕಾರ, ಅಂತಸ್ತು ಎಲ್ಲವೂ ಈ ರೀತಿಯ ಅಂಶಗಳನ್ನ ಹೆಚ್ಚು ಪ್ರತಿಪಾದಿಸುತ್ತಾ ಹೋಗುತ್ತದೆ.

ವಡ್ಡಾರಾಧನೆ ಕೃತಿಯಿಂದ ಆಯ್ದುಕೊಂಡಿರುವ ಈ ಕಥೆ ಬಹಳ ವಿಶಿಷ್ಟ ಕಥೆಯಾಗಿದೆ. ಅಗ್ನಿರಾಜನೆಂಬಾತ ತನ್ನ ಆರು ಜನ ಮಕ್ಕಳಲ್ಲಿ ಅತ್ಯಂತ ಸುಂದರಿಯಾದ ತನ್ನ ಕಿರಿಯ ಮಗಳನ್ನ ಮದುವೆಯಾಗುವುದು, ಮೊಮ್ಮಗನಿಗೆ ತಾನೆ ತಂದೆ, ತಾನೇ ತಾತನಾಗುವುದು ಈ ಕಥೆಯ ಕೇಂದ್ರ ವಸ್ತುವಾಗುತ್ತದೆ.ಎರಡನೆಯದಾಗಿ ಮನೆಗೆ ಬಂದ ಸನ್ಯಾಸಿಗೆ ಬಿಕ್ಷೆ ಹಾಕಲು ಹೋದ ಹೆಂಡತಿಯನ್ನು ಅನುಮಾನಿಸುವ ಗಂಡನನ್ನು ಕಾಣುತ್ತೇವೆ. ಮೂರನೆಯದಾಗಿ ತನಗೆ ತಂದೆ–ತಾತ ಇಬ್ಬರೂ ಒಂದೇ ಎಂದು ತಿಳಿದ ಕಾರ್ತೀಕ ಹದಿನಾರನೇ ವಯಸ್ಸಿನಲ್ಲಿಯೇ ವೈರಾಗ್ಯವನ್ನು ತಾಳುವುದು

ಇವು ಒಂದು ಅದ್ಭುತ ಕಥಾಪ್ರಪಂಚವನ್ನು ಕಣ್ಣ ಮುಂದೆ ಚಿತ್ರಿಸುವುದಕ್ಕೆ ಅಲ್ಲ. ಇಂದು ನಾವು ಅನುಭವಿಸುತ್ತಿರುವ ಸಮಸ್ಯೆಗಳನ್ನು ಕಣ್ಣ ಮುಂದೆ ನಿಲ್ಲಿಸಿ ರೋಮಾಂಚನಗೊಳಿಸಿ ಆಶ್ಚರ್ಯ ಚಕಿತರನ್ನಾಗಿ ಮಾಡುತ್ತದೆ.



ಇದು ಈಡಿಪಸ್‌ನ ಪ್ರಜ್ಞೆಯನ್ನು ನೆನಪಿಗೆ ತರುವ ಭಾರತೀಯ ಮೂಲದ ಅಪರೂಪದ ಕಥೆಯೆನ್ನಬಹುದು. ಈ ಕೃತಿಯ ಜೈನಧರ್ಮದ ಪರಿಸರ–ದರ್ಶನ ಇದರ ನೆಲೆಗಟ್ಟಾದರೂ, ಇದು ಕಟ್ಟಿಕೊಡುವ ಸಾಂಸ್ಕೃತಿಕಲೋಕ, ಮಾನವ ಅನುಭವಗಳು ಬಹಳ ಕುತೂಹಲಕಾರಿಯಾಗಿರುವುದನ್ನು ಗಮನಿಸಬಹುದು. ವಡ್ಡಾರಾಧನೆಯ ಗದ್ಯ ಶೈಲಿ ಇಡೀ ಕನ್ನಡ ಸಾಹಿತ್ಯದಲ್ಲೇ ಅಪೂರ್ವವಾದ ಶೈಲಿಯಾಗಿದೆ.

ಅಗ್ನಿರಾಜನ ಮಗನಪ್ಪ ಸ್ವಾಮಿ ಕಾರ್ತಿಕ ಋಷಿಯ ಕಥೆಯಂ ಪೇೞ್ವೆಂ

ಗಾಹೆ ॥ ರೋಹೇದಯಮ್ಮಿ ಸತ್ತೀ ಎಹದೋ ಕೊಂಚೇಣ ಅಗ್ಗಿದಯಿದೋ ವಿ ।
ತವ್ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

[ರೋಹೇದಯುಮ್ಮಿ – ರೋಹೇದಕವೆಂಬ ಪೊೞಲೊಳ್, ಸತ್ತೀಎಹದೋ – ಶಕ್ತಿಯೆಂಬಾಯುಧದಿಂದಿಱಿಯೆ ಪಟ್ಟೊನಾಗಿ, ಕೊಂಚೇಣ – ಕ್ರೌಂಚನೆಂಬರಸಿನಿಂದಂ, ಅಗ್ಗಿದಯಿದೋ ವಿ–ಅಗ್ನಿರಾಜನ ಕಾದಲಿಸೆಪಡುವ ಮಗಂ, ತವ್ವೇದಣಂ – ಆ ವೇದನೆಯಂ, ಅಧಿಯಾಸಿಯ – ಲೇಸಾಗಿ ಸೈರಿಸಿ, ಪಡಿವಣ್ಣೋ – ಪೊರ್ದಿದೊಂ, ಉತ್ತಮಂ ಅಟ್ಠಂ – ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಲಾಳವಿಷಯದೊಳ್ ಕೃತ್ತಿಕಾಪುರಮೆಂಬುದು ಪೊೞಲದನಾಳ್ವೊನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿಯೆಂಬೊಳಾಯಿರ್ವ್ವರ್ಗ್ಗಂ ಮಕ್ಕಳ್ ಬಂಧುಮತಿ ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತ್ತಿಕೆಯೆಂದಿಂತಱುವರ್ ಪೆಣ್ಗೂಸುಗಳ್ ಅಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣ ಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುಪವಾಸಂಗೆಯ್ದು ಬಸದಿಗರ್ಚನೆಯಂ ಕೊಂಡುಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ ರಿಸಿಯರ್ಕಳುಮಂ ಗುರುಪರಿವಿಡಿಯಿಂ ವಂದಿಸಿ ವ್ರತಂಗನೇಱಿಸಿಕೊಂಡು ಸಿದ್ಧ ಶೇಷೆಯಂ ಕೊಂಡುಬಂದು ತಾಯ್ಗಂ ತಂದೆಗಂ ಕೊಟ್ಟು ಪೋಪಾಗಳ್ ಅರಸಂ ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾಕೆಗಾಟಿಸಿ ಸಾಮಂತ ಮಹಾಸಾಮಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಂ ಸಮಯಿಗಳ್ಗಂ ಬಱಿಯಟ್ಟಿ ಬರಿಸಿಯರಸನಿಂತೆಂದನ್ ಎಲ್ಲ ಎನ್ನಾಳ್ವ ಮಂಡಳಂಗಳೊಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕುಂ

ಎಂದು ಬೇಱವೇ ಯುರಸನನಿಬರುಮಂ ಬೆಸಗೊಂಡೊಡವರ್ಗ್ಗಳೆಲ್ಲಮಿಂತೆಂದರ್ಒಳ್ಳಿತಪ್ಪಾನೆಯುಂ ಎಂದು ಬೆಸಗೊಂಡೊಡೆ ತಾಯ್ ಮನದೋಳ್ ಬೞ್ದಿದೊಳಾಗಿ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ ಪೃಥ್ವಿಯನಾಳ್ವೊಂಗಕ್ಕುಮೆಂದು ಪೇೞ್ವೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದರಾವ ವಸ್ತು ಪೇೞಿಂ ಪೇೞ್ದೊಡೆ ತಕ್ಕುದು ತಗದುದುಮನಱಿಯಲಕ್ಕುಮೆಂದೊಡೆ ಅರಸನಿಂತೆಂದನಿವರೆಲ್ಲರ ಪೇೞ್ವಂತು ಪೇೞ್ವರೆಲ್ಲರೊಡಂಬಡುವರಲ್ಲರ್ ಬಹುಪ್ರಳಾಪಿಗಳಿವರಂ ಪೊೞಲಿಂದಟ್ಟಿ ಕಳೆಯಿಮೆಂದಟ್ಟಿ ಕಳೆದುೞಿದರೆಲ್ಲರುಮಂ ಬೆಸಗೊಂಡೊಡನಿಬರುಮೊಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂದೊಡೆ ಅರಸನೆನಗಕ್ಕುಂ ಬಲಮೆಂದು ಮೂಱು ಸೂೞ್ವರಂ ಸಾಱಿ ನುಡಿದೊಡಂಬಡಿಸಿ ವೀರಮತಿ ಮಹಾದೇವಿಯಂ ಬೇಡಿ ಕೃತ್ತಿಕೆಯಪ್ಪ ಕಿಱಿಯ ಮಗಳಂ ಮದುವೆನಿಂದೊನ್ ದಿವಸಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯ ವ್ರತಮಂ ಕೈಕೊಂಡು ನೆಗೞ್ದಳ್

ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭಮಾದಂದು ಸರವಣವೆಂಬುದ್ಯಾನ ವನದೊಳಗಣ ಸರವಣಮೆಂಬ ಬಾವಿಯೊಳ್ ಜಲಕ್ರೀಡೆಯಾಡಲ್ ಬಯಕೆ ಯಾದುದೆಂದರಸಂಗಱಿಪಿದೊಡರಸನನು ಮತದಿಂ ಜಲಕ್ರೀಡೆಯಾಡಿ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತ್ತಿಕನೆಂದು ಪೆಸರನಿಟ್ಟರ್. ಮತ್ತಾತನಿಂ ಬೞಿಯಂ ಪೆಣ್ಗೂಸುಮಂ ಪೆತ್ತೊಡೆ ಆಕೆಗೆ ವೀರಶ್ರೀಯೆಂದು ಪೆಸರನಿಟ್ಟು ಬಳಿದೊಡಾಕೆಯಂ ಕೊಗಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರ್. ಇಂತು ಕಾಲಂ ಸಲೆ ಮತ್ತಿತ್ತ ನಮಿ ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತ್ತಿಕಂ ಬಳೆದು ಪದಿನಾಱು ವರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರರ್ಕ್ಳುದ್ಯಾನವನಕೆ ವನಕ್ರೀಡೆಯಾಡಲ್ ಪೋಗಿಯಾಡುತಿರ್ಕನ್ನೆಗಮೆಲ್ಲಾ ಕುಮಾರರ್ಕ್ಳ್ಗಂ ತಾಯ್ತಂದೆಯಜ್ಜರ್ಕ್ಳ ಮನೆಯಿಂದಂ ಪೂಸಲುಮುಡಲುಂ ತುಡಲುಂ ಪೂವುಂ ತಂಬುಲಮುಂ ತಿಂಬಂಡಂಗಳುಂ ಬಂದುವು. ಸ್ವಾಮಿ ಕಾರ್ತ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬೞಿದೊನಾಗಿ ವನಕ್ರೀಡೆಯನಾಡಿ ಮನೆಗೆ ವಂದು ತಾಯಗಿಂತೆದನ್ ಅಬ್ಬಾ ನಿಮ್ಮ ತಂದೆಯೆಪ್ಪೆಮ್ಮಜ್ಜನೊಳನೊ ಇಲ್ಲೆನೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬೞ್ದಿದೊಳಾಗಿ ಏನಂ ಪೇೞ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇೞ್ದೊಡದಂ ಕೇಳ್ದು ಅದುವೆ ವೈರಾಗ್ಯ ಕಾರಣಮಾಗಿ ಶ್ರೀವರರೆಂಬಾಚಾರ್ಯರ ಪಕ್ಕದೆ ತಪಂಬಟ್ಟಾಗಮಂಗಳೆಲ್ಲಮಂ



ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧವೆಂಬ ಪರ್ವತಮನೆಯ್ದಿಯುದಱ ಮೇಗೆ ರಾತ್ರಿಪ್ರತಿಮಾಯೋಗಂಗೆಯ್ದೊರ್. ಆ ಇರುಳ್ ಪಿರಿದೊಂದು ಮೞೆ ಕೊಂಡು ಮೆಯ್ಯ ಮಳಮೆಲ್ಲಮಂ ಕರ್ಚಿ ಕಳೆದು ಪಾಷಾಣಮೆಂಬ ಮಡುವಂ ನೀರ್ ಪೊಕ್ಕಗಳಾಮಡುವಿನ ನೀರ್ ಸರ್ವೌಷಧಿ ಯಾದೊಡಂತಲ್ಲಿಯ ನೀರಂ ಮಿಂದವರ್ಗ್ಗೆಲ್ಲಾ ವ್ಯಾಧಿಯುಂ ಕಿಡುವುವಾದುವಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು.

ಮತ್ತೆ ಸ್ವಾಮಿ ಕಾರ್ತ್ತಿಕ ಋಷಿಯುಂ ವಿಹಾರಿಸುತ್ತಂ ಬಂದು ಕೋಗಳಿಯನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣ್ಯದ ಮನೆಗಳುಮಂ ತೊೞಲುತ್ತಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕರುಮಾಡದ ಮೇಗಣ ನೆಲೆಯೊಳಿರ್ದು ವೀರಶ್ರೀಮಹಾದೇವಿಯರಸನ ತಲೆಯಂ ತನ್ನ ತೊಡೆಯಮೇಲಿಟ್ಟುಗುರಿಸುತಿರ್ದಾಕೆ ಭಟಾರರ ಬರವಂ ಕಂಡಱಿದೆಮ್ಮಣ್ಣಂಗಳಪ್ಪ ಭಟಾರರ್ ಚರಿಗೆವಂದಪ್ಪೊರೆಂದು ಮಱಲುಂದಿದರಸನ ತಲೆಯಂ ಕೞಿಕೊಂಡಾಧಾರಮನಿಟ್ಟು ನಿಱಿಸಲೆಂದು ಕರುಮಾಡದಿಂದಿೞಿದು ಪರಿತರ್ಪನ್ನೆಗಂ ಭಟಾರರ್ ವಂದರಮನೆಯಂಗಣಮಂ ಪೊಕ್ಕು ಮಗುೞ್ದು ಪೋಗಿ ಬಾಗಿಲ್ಮಾಡಮನೆಯ್ದಿದಾಗಳರಸಿ ಪೆಱಗಣಿಂ ಪರಿ ತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೆಱಗಿ ನಿಲ್ಕೆ ಭಟಾರಾ ಎಂದು ನಿಱಿಸಿದೊಡೆ ಭಟಾರರೆಂದರಬ್ಬಾ ಮನೆಯಂಪೊಕ್ಕು ಬಂದೊಮಿನ್ನೆಮಗೆ ನಿಲಲಾಗದೆಂದೊಡರಸಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದಮೋಘಂ ನಿಲಲ್ವೇೞ್ಕುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ್

ಇತ್ತರಸನೆೞ್ಚತ್ತು ದೆಸೆಗಳಂ ನೋಡಿಯರಸಿಯಂ ಕಾಣದರಸಿಯೆಲ್ಲಿರ್ದೊಳೆಂದು ಕೆಲದವರಂ ಬೆಸಗೊಂಡೊಡವರೆಂದೊರ್ ಅರಸಿಯೊರ್ವ ಸವಣಂ ಬಂದೊಡಾತನಂ ಕಂಡು ಕರುಮಾಡದಿಂದಿೞಿದು ಪರಿದು ಬೞಿಯಂ ತಗುಳ್ದು ಬಾಗಿಲ್ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪ್ಪೊಳ್ ನೋಡಿಮೆಂದರಸಂಗೆ ತೋಱಿದೊಡರಸಂ ಕಂಡೆನ್ನನಗಲ್ದು ನಿಚ್ಚಲೀ ಸವಣನಲ್ಲಿಗೆ ಪರಿವಳೆಂದು ಕಿನಿಸಿ ಕರುಮಾಡದಿಂದಿೞಿದು ರಿಸಿಯರಿರ್ದಲ್ಲಿಗೆ ವೋಗಿ ಶಕ್ತಿಯೆಂಬಾಯುಧದಿಂದುರಮಂ ನುರ್ಚಿಪೋಗಿಟ್ಟರಸಿಯುಮಂ ತಲೆನವಿರಂ ಪಿಡಿದು ದಱದಱನೆ ಎೞೆದುಕೊಂಡು ಬಂದಂ.

ಸ್ವಾಮಿ ಕಾರ್ತಿಕಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸಮಟಿದು ಬೇಸಗೆಯ ಕಡುವಿಸಿಲಿಂದಂ ಝಳದಿಂದಂ ಬೆಂಕೆಯಿಂದಂ ನೀರಟ್ಕೆಯಧಿಕಮಾಗಿ ತಣ್ಪಿ ನೊಳೊಳ್ಳಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ದೊರ್ನನ್ನೆಗಂ ತಮ್ಮಜ್ಜಿಯುಪ್ಪ ವೀರಮತಿಮಹಾದೇವಿ ಬ್ರಹ್ಮಚರ್ಯವ್ರತಮಂ ಕೊಂಡು ಕಾಲಂಗೆಯ್ದು ವ್ಯಂತರದೇವತೆಯಾಗಿ ಪುಟ್ಟಿದಾಗಾಸನಕಂಪಮಾಗಿಯಱಿದು ಬಂದು ಭಟಾರಾ ಬೆಸನೇನಿವರೆಲ್ಲರುಮಂ ಕೊಂದಪ್ಪೆನೆಂದೊಡೆ ಭಟಾರರೆಂದರಂತೇನುಂ ಬೇಡ ನೀನೆಮ್ಮಂ ತಣ್ಪಿನೆಡೆಗೆ ಕೊಂಡುಪೋಗೆಂದೊಡೆ ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣದೆಸೆಯ ಪರ್ವತದ ಕೊಳದ ತಡಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ ಬೆಟ್ಟದಮೇಗಣಿಂ ಪಾಯ್ತರ್ಪ ನಿರ್ಝರಶೀಕರಂಗಳಿಂ ಮೆಯ್ಯಾಪ್ಯಾಯನಮಾಗಿ ಸಂನ್ಯಸನಂ ಗೆಯ್ದು ಶುಭಪರಿಣಾಮದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತು ಮೂಱು ಸಾಗರೋಪಮಾಯುಷ್ಯಮನೊಡೆಯೊನಹಮಿಂದ್ರನಾಗಿ ಪುಟ್ಟಿದೊಂ.

ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರ ಎಂದಿರುಳುಂ ಪಗಲುಂ ಪಲವು ದಿವಸಮೊಂದೆ ಪಾಂಗಿನೊಳ್ ಪ್ರಳಾಪಿಸಿ ದುಃಖಂಗೆಯ್ಯೆ ಅರಸನುಮಾಕೆಗೆ ಕಡುನಲ್ಲನಪ್ಪು ದಱಿಂದಾದಮಾನುಮುಬ್ಬೆಗಂ ಬಟ್ಟಿರ್ದ್ದಿಂತೆಂದನ್ ಆರೊರ್ವರರಸಿಯಟ್ಕೆಯಂ ಮಟ್ಗಿಸಿ ದುಃಖಮಂ ಮಱೆಯಿಸುವೊರವರ್ಗೊಸಗೆಯಂ ಮಾಡುವೆನೆಂದು ಪೊಟಿಲೊಳಗೆ ಗೋಸಣೆಯಂ ತೊಟಲ್ಚಿದೊಡದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತು ಮಟ್ಗಿ ದಿರ್ದೊರ್ಡೊರ್ವಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯಂ ಪೂಸಿ ಬೋಟದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮುಂ ಗುಂಡಿಗೆಯುಮಂ ಪಿಡಿದು ಬರ್ಪೊನನರಸಂ ಕಂಡಿತೆಂದನೆಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬರ್ಪೊರೆಯೆಂದು ಪೇಟ್ದಾಗಳೆಲ್ಲಿರ್ದರೆಂದೆಟ್ದು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳಾಗಳಾ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನ್ ಅಂದಿಂದಿತ್ತ ಬಾದುಬ್ಬೆಯ ಪರ್ವಮುಂ ಪಗರಣದಾಟಪಾಮುಟಮಾದುವು. ಮತ್ತೆ ಸ್ವಾಮಿ ಕಾರ್ತಿಕ ಋಷಿಯರ್ ಮುಡಿಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿ ದೊಡಂದಿಂದಿತ್ತ ಸ್ವಾಮಿಯೆಂಬ ತೀರ್ಥಮಾಯ್ತು. ಮತ್ತಿತ್ತ ಕೃತ್ತಿಕೆಯೆಂಬ ಪೊಟಿಲನಾಳ್ವಗ್ನಿ ರಾಜನೆಂಬರಸಂ ತನ್ನ ಮಗಳಂ ತಾನೆ ಕೊಂಡು ಮೊಱೆಯಟಿದನಪ್ಪು ದಱಿಂದಲ್ಲಿಯ ಜನಮುಂ



ಶ್ಲೋಕ ॥ ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ ।
ರಾಜಾನಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥

ಎಂದರಸನಂ ಕಂಡು ಮೊಱೆಯಟಿದು ನೆಗಟಿಲ್ ತಗುಳ್ದೊಡಾಪೊಟಿಲ್ಗೆ ಬೋಗಂಕಾರೋಹಣಮೆಂದು ಪೆಸರನಿಟ್ಟರ್. ಇದು ಕಾರ್ತಿಕ ಋಷಿಯ ಕಥೆ. ಮತ್ತೆ ಪೆಱರುಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವವರ್ಗ್ಗಳ್ ಸ್ವಾಮಿ ಕಾರ್ತಿಕ ಋಷಿಯರಂ ಮನದೊಳ್ ಬಗೆದೇಱುಂ ಪುಣ್ಣುಂ ವ್ಯಾಧಿಯುಂ ಪಸಿವು ನೀರಟ್ಕೆ ಶೀತವಾತೋಷ್ಣಂಗಳುಮಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ.

## ಕವಿಪರಿಚಯ

**ಶಿವಕೋಟ್ಯಾಚಾರ್ಯ :** ಇವರು ಸುಮಾರು ಕ್ರಿ.ಶ. ೯೨೦ ರ ಸನಿಹದಲ್ಲಿದೆ. ಶ್ರೇಷ್ಠ ಜೈನ ಕವಿಯಾದ ಶಿವಕೋಟ್ಯಾಚಾರ್ಯನು ಹಳೆಗನ್ನಡದಲ್ಲಿ ಸುಂದರವಾದ ಗದ್ಯಕಾವ್ಯವನ್ನು ರಚಿಸಿದನು. ಈ ಕಥಾಗ್ರಂಥದಲ್ಲಿ ೧೯ ಮಹಾತ್ಮರ ಜೀವನ ಕಥೆಗಳಿವೆ. ಕಥಾಕೋಶವೆಂದೇ ಈ ಗ್ರಂಥ ಪ್ರಸಿದ್ಧವಾಗಿದೆ. ಈ ಕೃತಿ ಕನ್ನಡದ ಮೊಟ್ಟಮೊದಲ ಗದ್ಯಕಾವ್ಯವೆನಿಸಿದೆ. ಪಂಪಪೂರ್ವ ಕೃತಿಯೂ ಇದಾಗಿದೆ. ಈ ಕೃತಿ ಹತ್ತೊಂಬತ್ತು ಕಥೆಗಳ ಗೊಂಚಲು. ಇದರ ಮೂಲ ಪಾಕೃತ.

**ಕಠಿಣ ಪದಗಳು :**

ಗಾಹೆ–ಶ್ಲೋಕ; ಪೊಟಿಲ್–ಪಟ್ಟಣ; ಪ್ರತಿಮಾಯೋಗ–ಪ್ರತಿಮೆಯ ಹಾಗೆ ನಿಲ್ಲುವ ಭಂಗಿ; ಚರಿಗೆ–ಬಿಕ್ಷೆ; ಗೋಸಣೆ–ಘೋಷಣೆ.

**ಪ್ರಶ್ನೆಗಳು:**

೧. ಶ್ರೇಷ್ಠವಾದುದೆಲ್ಲ ರಾಜನಿಗೆ ಸೇರಬೇಕೆಂಬ ಚಿಂತನೆ ಈ ಕತೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿ.
೨. ತಂದೆ – ಮಗಳ ಸಂಬಂಧವೇ ಬದಲಾದ ಚಿತ್ರಣವನ್ನು ಚರ್ಚಿಸಿ.
೩. ಅಗ್ನಿರಾಜ ತನ್ನ ಮಗಳನ್ನು ಮದುವೆಯಾಗುವುದಕ್ಕೆ ಕೇವಲ ಲೈಂಗಿಕ ಆಕರ್ಷಣೆಯೆ ಕಾರಣವೆ? ವಿಚಾರಮಾಡಿ.
೪. 'ಪುರುಷರ ಅಧಿಕಾರ ಏನನ್ನೂ ಬೇಕಾದರೂ ಮಾಡುತ್ತದೆ'– ಈ ಹೇಳಿಕೆಯನ್ನು ಕಥೆಯ ಮೂಲಕ ವಿವರಿಸಿ.

*

# ೩. ಬೇಡರ ಕಣ್ಣಪ್ಪನ ರಗಳೆ

**– ಹರಿಹರ**

**ಆಶಯ :**

ಪ್ರಸ್ತುತ ಕಾವ್ಯಭಾಗವಾದ 'ಬೇಡರ ಕಣ್ಣಪ್ಪನ ರಗಳೆ' ಯಲ್ಲಿ ಬರುವ ಕಣ್ಣಪ್ಪನು ಶಿವನಿಗೆ ತನ್ನ ಕಣ್ಣುಗಳನ್ನೇ ಕಳೆದುಕೊಟ್ಟ ಮಹಾನ್ ಶಿವಭಕ್ತ. ಮುಗ್ಧ ಭಕ್ತ. ಈತ ತಮಿಳುನಾಡಿನ ಅರುವತ್ತ ಮೂರು ಶೈವ ಪುರಾತನರಲ್ಲಿ ಒಬ್ಬ. ಹರಿಹರ ಇವನನ್ನು 'ಕಾರಣಿಕ'ನೆಂದು ಕಥಾರಂಭದಲ್ಲೇ ಕರೆದಿದ್ದಾನೆ. ಕಿಂಚಿತ್ತೂ ಸಂಸ್ಕಾರವಿಲ್ಲದ ಬೇಡನೊಬ್ಬನ ಮುಗ್ಧಭಕ್ತಿ ಶಿವನಿಗೆ ಪ್ರಿಯವಾಯಿತು. ಆಡಂಬರದಿಂದ ಕೂಡಿದ ತಾಮಸಿಕ ಭಕ್ತಿಗೂ ನಿಷ್ಕಾಮ ಸಾತ್ವಿಕ ಭಕ್ತಿಗೂ ಇರುವ ವ್ಯತ್ಯಾಸವನ್ನು ಪೂಜಾರಿ ಹಾಗೂ ಬೇಡ ಈ ಪಾತ್ರಗಳಲ್ಲಿ ಹರಿಹರ ಚೆನ್ನಾಗಿ ನಿರೂಪಿಸಿದ್ದಾನೆ. ವೇದೋಕ್ತ ರೀತಿಯ ಪೂಜಾರಿಯ ಪೂಜೆಗಿಂತ ಬೇಡನ ನಿರ್ಮಲ ಮನಸ್ಸಿನ ಆಡಂಬರ ರಹಿತ ಮುಗ್ಧಪೂಜೆ ಶಿವನಿಗೆ ಹೆಚ್ಚು ಪ್ರಿಯವಾಯಿತು. ಇವರಿಬ್ಬರಲ್ಲಿ ಯಾರು ಉತ್ತಮರೆಂಬುದನ್ನು ಸ್ಪಷ್ಟಪಡಿಸಲು ಶಿವ ತನ್ನ ಕಣ್ಣೊಡೆದು ರಕ್ತ ಒಸರುವಂತೆ ಮಾಡುವನು. ತನ್ನ ಜೀವದ ಗೆಳೆಯನೆಂದು ತಿಳಿದು ಶಿವನಿಗೆ ಕಣ್ಣಪ್ಪನು ಎರಡೂ ಕಣ್ಣುಗಳನ್ನು ಅರ್ಪಿಸುವನು. ಈ ಮುಗ್ಧ ಭಕ್ತನ ಪಾಲಿಗೆ ಶಿವ ಬರಿಯ ಶಿಲಾಲಿಂಗವಲ್ಲ; ಹಸಿವು, ಭಯ, ನೋವು ನಲಿವುಗಳನ್ನು ಹೊಂದಿರುವ ಸಾಮಾನ್ಯ ಜೀವ. ಇವನು ಶಿವನಿಗಾಗಿ ತಾನು ತಂದ ಬೇಟೆಯ ಮಾಂಸವನ್ನು ಸಿದ್ಧಪಡಿಸುವುದು, ಶಿವನು ಉಂಡಾಗ ಸಂತೋಷಗೊಂಡು ಆವೇಶದಿಂದ ಕುಣಿದಾಡುವುದು– ಇಂಥ ಕಡೆಗಳಲ್ಲಿ ಕಣ್ಣಪ್ಪನ ಮುಗ್ಧಭಕ್ತಿಯ ಚಿತ್ರ ಹೆಚ್ಚು ಸ್ಫುಟವಾಗಿ ಮೂಡಿಬಂದಿದೆ. ಕಣ್ಣಪ್ಪನ ರಗಳೆಯಲ್ಲಿ ನಿರ್ಮಲ ಮನಸ್ಸಿನ ಭಕ್ತಿ ಹಾಗೂ ಡಾಂಭಿಕ ಭಕ್ತಿಗಳ ಪರಿಚಯ ಮಾಡಿಕೊಡುವ ಹರಿಹರ ಡಾಂಭಿಕ ಭಕ್ತಿಯ ವಿಡಂಬನೆಯನ್ನು ಸಮರ್ಥವಾಗಿ ನಿರ್ವಹಿಸಿದ್ದಾನೆ.



ಕಂದ ॥ ಒಪ್ಪುವ ಶಿವಭಕ್ತಿಗೆ ಕ
ಣ್ಣಪ್ಪನನೀಧರೆಗೆ ಪೊಸತೆನಿಪ್ಪನನೀಶಂ
ಗಪ್ಪನನೊಪ್ಪಿರೆ ಮೆರೆದಂ
ದರ್ಪಕ ದರ್ಪಪ್ರಹಾರಿ ಹಂಪೆಯ ದೇವಂ

ಶ್ರೀ ಸದಾಶಿವನ ಭಕ್ತಿಗೆ ತವರ್ಮನೆಯಪ್ಪ
ದೇಶಮೊಪ್ಪಿರ್ದುದು ಧರಾತಳಕೆ ಸುಖಮಪ್ಪ
ಚೋಳ ಮಂಡಲವದರೊಳೆಸೆವೊಂದು ಪಟ್ಟಣಂ
ಕೇಳುತಿರುಕಾಳತ್ತಿಯೆಂದೆನಿಪ ಪಟ್ಟಣಂ
ಅಲ್ಲಿಪ್ಪ ನೋರ್ವ ಶಬರಾಧಿನಾಥಂ ನೋಡೆ
ಎಲ್ಲಾ ಪುಳಿಂದರ್ಗೆ ನಾಯಕಂ ತಾ ನೋಡೆ
ಪೆಸರೆಸೆವ ಕಣ್ಣಪ್ಪನೆಂಬುದಾತಂಗೆ
ವಸುಧೆಯೊಳಗುಳ್ಳ ಬೇಂಟೆಗಳನರಿವಾತಂಗೆ
ಕಾರಣಿಕನೆಂದರಿಯಬಾರದಾತನ ವೇಷ
ಆರಯ್ಯೆ ಕಾರ್ಮುಗಿಲ ಮರೆಯ ಸೂರ್ಯನ ವೇಷ
ಒಂದೊಂದು ಮೃಗದ ಜನ್ಮದ ಋಷಿಗಳೆಲ್ಲರುಂ
ಬಂದಿರ್ಪರಾತನಾಡುವ ಹೊಲದೊಳೆಲ್ಲರುಂ
ಸತ್ಯಮಂ ನುಡಿವುದಂ ಕನಸಿನೊಳ್ಕಂಡರಿಯ
ಅತ್ಯಂತ ಶಿವನೆಂಬುದಂ ಮನಸಿನೊಳಗರಿಯ
ಅರಿಯನಾತಂ ಬೇರೆ ದೇವರುಂಟೆಂಬುದಂ
ಅರಿಯನಾತಂ ಬೇರೆ ಪಿರಿಯರುಂಟೆಂಬುದಂ
ಪಸಿವಿಂಗೆ ತೆರಪಿಲ್ಲ ವಿಷಯಕ್ಕೆ ತೆರಪಿಲ್ಲ
ವ್ಯಸನಕ್ಕೆ ತೆರಪಿಲ್ಲ ಪುಸಿವುದಕೆ ತೆರಪಿಲ್ಲ
ಜಾತಿಧರ್ಮದ ಬೇಂಟೆಯೇ ತನಗೆ ಪಿರಿದಾಗೆ
ಆತುರದೊಳಿರ್ಪನಂತದು ತನಗೆ ಸೊಗಸಾಗೆ
ತನ್ನುವಂ ತಾನರಿಯನಿದಿರುಮಂ ಪರಿಕಿಸಂ
ಮ್ಮುನ್ನಿನಾರಾಧನೆಯ ಪರಿಯಂ ವಿಚಾರಿಸಂ

ಇಂತಿರ್ದು ಬೇಂಟೆಗೆಂದನುವಾಗಿ ಪೊರಮಟ್ಟು
ಸಂತಸದಿ ಬರ್ಪಬೇಡರ ಪಡೆಯೊಳಳವಟ್ಟು

ಜುಂಜುದಲೆ ಕೆಂಗಣ್ಣು ಗುಂಜಾಭರಣಮೆಸೆಯೆ
ರಂಜಿಸಲ್ತೊಟ್ಟ ಎದೆಗುಪ್ಪಸಂ ತಾಂ ಮೆರೆಯೆ
ತಲೆಯುರದ ಕರದ ಕವಡಿಕೆಯ ದಂಡೆಗೆಳೆಸೆಯೆ
ನಲಿದು ಬಿಗಿದುಟ್ಟು ತೊಗಲುಡಿಗೆಯಲಗುಗಳೆಸೆಯೆ
ಮೊಗದೊಳೊಪ್ಪುವ ವಿಭೂತಿಯ ತುಂತುರುಗಳೆಸೆಯೆ
ನೆಗದು ಕಟ್ಟಿದ ನೆತ್ತಿಗನ್ನಡಿ ಕರಂ ಪೊಳೆಯೆ
ನಿಡಿದಾಗಿ ಬೆನ್ನೊಳಿಳುಹಿದ ಚಮರಿಯೊಪ್ಪುತಿರೆ
ಹಿಡಿದ ಬಿಲ್ಲೆಡಗಯ್ಯೊಳೊಪ್ಪಿ ತೋರುತ್ತಮಿರೆ
ನಿಡಿದಾಗಿ ಬೆನ್ನೊಳಗೆ ಬತ್ತಳಿಕೆಯೊಪ್ಪುತಿರೆ
ಕೂರಂಬುಗಳ ಹೊಗರು ಪಂಚಾಕ್ಷರಿಯನುಗುಳೆ
ಆರುತ್ತ ಪೊರಮಟ್ಟನಲ್ಲಿ ಬಿಲ್ಲಪೊರ್ಗಳೆ

ಬಂದು ತರುಗಿರಿ ಗುಲ್ಮಲತೆಗಳಿಡಿದಡವಿಯೊಳು
ನಿಂದು ಬೇಡರ ತೋಹು ಸೋಹಿನೊಳು ದರುವಿನೊಳು
ಪರಿದು ತಿರುಕಾಳತ್ತಿ ಮಲೆಯ ತಪ್ಪಲೊಳೆಲ್ಲ
ನೆರೆ ನೆಗೆದು ನೋಳ್ಪ ಕಾರಣಿಕ ಮೃಗಮುಮನೆಲ್ಲ
ಕಂಡು ನೀಡಡಿ ಇಟ್ಟು ಕುಸಿದು ಕುಬುಬೆನೆ ಕೂಗಿ
ದಂಡೆನೋಟಂ ಶರಂ ಸಂಧಾನದೊಳು ತಾಗಿ
ಕಿವಿಗೆ ಬಲಗೈಯಿಂದೆ ನಾರಿಯಂ ತರುತಮಿರೆ
ತವಕಿಸುವ ಕೂರಂಬು ಬಿಡುಬಿಡೆಂಬಂತೆಯಿರೆ
ಬಿಡುವುದೇ ತಾಗುವುದೊ ತಾಗುವುದೆ ನಡುವುದೋ
ನಡುವುದೇ ನೋಟವೋ ನೋಟವೇ ನಡುವುದೋ
ಎಂಬಂತೆ ತೊಡುವ ಬಿಡುವನುಮಾನವನುವಾಗೆ
ಇಂಬಿನಿಂ ಮೃಗಕುಳವನೆಸೆವ ಪರಿ ಪೊಸತಾಗೆ
ಎಸುತ ಬರೆ ಸಗ್ಗಕ್ಕೆ ಹಾರುತಿಪ್ಪವು ನೋಡ
ಅಸು ಪೋಪ ಪರಿ ತನಗೆ ಕಾಣಬಾರದು ನೋಡ
ಮೃಗಜಾತಿ ಭಯದಿಂದ ಓಡಲಮ್ಮವು ಕರಂ
ಬಗೆಯೊಳಗೆ ಸಂತಸಂಬಡುತಮಿರ್ಪವು ಕರಂ
ಕಂಡವಂ ಮರುಮೆಟ್ಟಮೆಟ್ಟಲೀಯದೆಯೆಸುತೆ
ಕಂಡವಂ ಮರುಹುಟ್ಟ ಹುಟ್ಟಲೀಯದೆಯೆಸುತೆ
ಕಂಡ ಮೃಗ ವೊಂದುವುಂ ತಪ್ಪವಾತನ ಮುಂದೆ



ಅಂಡಲೆವ ಕರ್ಮವಂ ನೀಗುತಾತನ ಮುಂದೆ
ಇಂತು ಮೃಗ ಸಂಕುಳದ ಬೇಂಟೆಗಳನಾಡುತಂ
ಇಂತು ಶಬರರ ವೇಷದಿಂದ ನಲಿದಾಡುತಂ

ಇರುತಿರುತ್ತೊಂದು ದಿವಸಂ ಬೇಂಟೆಗೆಂದಲ್ಲಿ
ಚರಿತದಿಂ ಕಣ್ಣಂದನೆಳ್ದು ಬರುತಿರ್ಪಲ್ಲಿ
ಬಲದ ಕಣ್ಬುರ್ಬು ಮೈವೆರ್ಚಿ ಕೆತ್ತುತ್ತಮಿರೆ
ನಲಿನಲಿದು ಬೇಂಟೆ ಲೇಸಪ್ಪುದೆಂದೆನುತಮಿರೆ
ಇತ್ತ ತಿರುಕಾಳತ್ತಿ ಮಲೆಯೊಳಿರ್ದೀಶ್ವರಂ
ಚಿತ್ತದೊಳ್ನೆನೆದು ಮಾಯಾಮೃಗವ ಶಂಕರಂ
ತೋರಿ ಸುಳಿದೆನ್ನತ್ತ ಕೊಂಡುಬಾರೆಂದೆನಲು
ಮೀರಿ ಗಳಗಳನಿಳಿದು ಬಂದುದಾ ಬೆಟ್ಟದೊಳು
ಬಂದು ದೂರದೊಳೆ ಕಾಣ್ಬಳತೆಯೊಳ್ಸುಳಿಸುಳಿದು
ನಿಂದು ನಡೆನಡೆದು ನಲಿದಾಡುತಂ ಹೊಳೆಹೊಳೆದು
ತೋರೆ ಬೆಂಬತ್ತಿದಂ ಮೃಗದ ಬೆಂಬಳಿವಿಡಿದು
ಮೀರಿಯಡರ್ದೇರುತ್ತಲಿಳಿವುತ್ತೆ ನಡೆನಡೆದು
ಗಿಡುವಿನೊಳ್ಪಳ್ಳಕೊಳ್ಳದೊಳ್ಕೊಡುವಿನೊಳ್
ಇಡಿದಿರ್ದ ಹೊದರಿನೊಳ್ಸನೊಳ್ದರುವರುವಿನೊಳ್
ಬೆಟ್ಟದೊಳ್ಬೆಳಗಿನೊಳ್ಕತ್ತಲಿಪ ಮೆಳೆಗಳೊಳ್
ಗಟ್ಟಿದೊಳ್ಗುಹೆಗಳ್ದೊಟ್ಟಯಿಪ ಮರಗಳೊಳ್
ಹುಲ್ಲು ಹಾವಸೆ ಬಿದಿರು ಬಳ್ಳಿಲತೆ ಮಡುಗಳೊಳ್
ಕಲ್ಲು ಮರ ಮೊರಡಿ ಕುಳಿತೆವರಿಡಿದ ಬೆತ್ತದೊಳ್
ಪೊಕ್ಕಲ್ಲಿ ಪೊಕ್ಕು ಪರಿದಲ್ಲಿ ಬೆನ್ನೊಳ್ಪರಿದು
ಮಿಕ್ಕಲ್ಲಿ ಮಿಕ್ಕು ನೆಗೆದಲ್ಲಿ ಒಡನೆಯೆ ನೆಗೆದು
ಮನಮುಮಂ ಕಣ್ಣುಮಂ ಮೃಗದ ಬೆಂಬಳಿಗಿತ್ತು
ತನುವುಮಂ ತವಕಮಂ ಹಿಡಿದೆಸುವ ಬಗೆಗಿತ್ತು
ಕೈಲಾಸ ಶಿಖರ ಸೋಪಾನವನಡರ್ವಂತೆ
ಕಾಳಾತ್ತಿನಾಥನಂ ಕ್ಷಣದೊಳಗೆ ಕಾಣ್ಬಂತೆ
ಇಂತು ಬರೆವರೆ ಕೊಂಡು ಬಂದುದಾ ಮೃಗವಲ್ಲಿ
ಕಂತುಹರನಿರ್ಪ ದೇವಾಲಯದ ಮುಂದಲ್ಲಿ
ಮಾಯವಾದುದು ಮೃಗಂ ನೋಡನೋಡಲ್ಸುಳಿದು

ಆಯೆಡೆಯೊಳೆಲ್ಲಿಯುಮಂ ಅರಸಿ ಕಾಣದೆ ಮುಳಿದು
ಶಿವನಿಳಯದತ್ತ ಲೆಯ್ತಂದನಾ ಕಣ್ಣಂದ
ನವಚಿತ್ತನುರವಣಿಸಿ ತೆರೆ ತೆರೆ ಕದವನೆಂದ
ಎನ್ನವನೆ ತೆರೆ ಕದವನೆನ್ನವನೆ ತೆರೆ ಎನಲ್
ಪನ್ನಗಧರಂ ಕದಂದೆರೆಯೆ ತಾಂ ಭೋಂಕೆನಲ್
ನೋಡು ಮಹದೇವನೇ ಕೇಳ್ ನೀನೆನ್ನವನೆ
ನೋಡುವೆಂ ನಿನ್ನ ನನ್ನಿಗಳನಿಂದೆನ್ನವನೆ
ಹೋದ ಮೃಗಮಂ ಕಂಡೊಡೆನಗೆ ನೀನೊಳ್ಪಿದಂ
ಆದಲ್ಲಿ ಭಾಗೆಯಂ ವಂಚಿಸೆಂ ಕೊಳ್ಳದಂ
ಎನಲಲ್ಲಿ ಶಿವಲಿಂಗದೊಳಗೆ ನಗುತೀಶ್ವರಂ
ಎನಗಿವನ ಕಡು ಮೋಹವರಿದೆನುತೆ ಶಂಕರಂ
ನೋಡುವೆನಿದರ್ಕೆನೆನುತ್ತೆ ಮೃಗವಂ ತೋರೆ
ನೋಡಿಕೊಂಡಾಹಾ ಎನುತ್ತೆ ನಂಬುಗೆಯೇರೆ

ಅಯ್ಯಯ್ಯ ಇಂತಪ್ಪ ನನ್ನಿಯಂ ಕಂಡೆನೇ
ಕಯ್ಯ ಮೇಲೆಯೆ ತೋರುವೊಡೆಯನಂ ಕಂಡೆನೇ
ಇನ್ನಗಲೆನಿನ್ನಗಲೆನಯ್ಯಯ್ಯ ನಿನ್ನುವಂ
ಮುನ್ನವರಿಯದೆ ಕೆಟ್ಟೆನಿನಿತುವರ ನಿನ್ನುವಂ
ಎನಗುಳ್ಳವಂ ನೀನೆ ನಿನಗುಳ್ಳವಂ ನಾನೆ
ನಿನಗೇನುವುಂ ಕೊರತೆ ಎನ್ನವನೆಯಾಳ್ದನೆ
ಬಿಡುವನಲ್ಲಂ ನಿನ್ನನಿನಿತು ದಿಟವುಳ್ಳನಂ
ನಡೆಯಿಸಿಕೊಳಲ್ಬಲ್ಲೆ ಇಂತಪ್ಪ ಬಂಟನಂ
ಇಂದು ಮೊದಲಾಗಿಯುಗಲೆಂ ನಿನ್ನ ಹಜ್ಜೆಯಂ
ತಂದಿಕ್ಕುವೆಂ ರಸಂ ಬಸಿವ ಪೊಸ ಮಜ್ಜೆಯಂ
ಅಂಜದಿರ್ಬಡವಾಗದಿರ್ಚಿಂತಿಸದೆರೆಲಮ
ಸಂಜೆಯಾದೊಡೆ ಯಿರಿಸಿ ಪೋಗೆ ನಿನ್ನಲಮೆಲಮ

ಎಂದು ಕುಣಿದಾಡುತಂ ಕಂಡ ಹುಲ್ಲೆಯನೆಚ್ಚು
ತಂದಂಬು ಸಹಿತವಿದೆ ದೇವ ಹುಸಿಯೆಂ ನಚ್ಚು
ನಿನ್ನ ಮುಂದಿಟ್ಟು ಸರಿಯಾಗಿ ಹಂಚುವೆ ನೋಡ
ಎನ್ನವನೆ ಎನ್ನಲ್ಲಿ ಮಾಯೆಯಿಲ್ಲಂ ನೋಡ
ಎನುತವಂ ಸ್ನೇಹದಿಂ ಬಿರ್ಚುತಂ ಸರಿಮಾಡಿ



ನಿನಗೆ ಮನವೊಲ್ದುದಂ ಕೊಳ್ವುದೆನುತಂ ನೋಡಿ
ತಪ್ಪದೆನ್ನಾಣೆ ಸರಿ ನಿನ್ನಾಣೆ ಸರಿ ಎಂದು
ಒಪ್ಪಿಸಿಕೊಡುತ್ತಲ್ಲಿ ನುಡಿದಂ ಮನಂ ಸಂದು
ನಿನ್ನ ಭಾಗೆಯನಾರ ಕಯ್ಯೊಳ್ಕುಡೆಂ ಕುಡೆಂ
ಇನ್ನಾನೆ ಕಾಸಿ ಲೇಸಂ ಮಾಡುವೆಂ ಬಿಡೆಂ

ಎಂದೊಂದು ಚೆನ್ನ ಸುಂಟಗೆಗೋಲನಳವಡಿಸಿ
ತಂದು ಕಿರ್ಚಂ ಹೊಸೆದು ಕಂಡಗಳಂ ಬಿಡಿಸಿ
ಕೆಂಪುಳ್ಳ ನುಂಪುಳ್ಳ ಸೊಂಪುಳ್ಳ ಕಂಡಮಂ
ಇಂಪುಳ್ಳ ತಂಪುಳ್ಳ ಹೆಂಪುಳ್ಳ ಕಂಡಮಂ
ಕಾಸುತಂ ತೆಗೆತೆಗೆದು ಪರಿಪಾಕಮಂ ಮಾಡಿ
ಲೇಸಪ್ಪ ಮೃದುವಪ್ಪ ತೆಳ್ಗಂಡವಂ ನೋಡಿ
ನಾಲಗೆಯೊಳಾಯ್ದಾಯ್ದು ಕೊಂಡವಂ ಬೇರಿರಿಸಿ
ಮೇಲಪ್ಪ ಮುತ್ತುಗದ ಪತ್ತಳೆಯ ಬಾಸಣಿಸಿ

ಕೊಂಡು ಬಂದೆನ್ನವನೆಯುಣ್ಣವನೆಯುಣ್ಣವನೆ
ಅಂಡಲೆವುತೆನ್ನವನೆ ಸವಿ ನೋಡು ನೋಡವನೆ
ಎನ್ನವನೆ ಎನ್ನಾಣೆಯುಣ್ಣವನೆ ನಿನ್ನಾಣೆ
ನಿನ್ನಾಣೆ ಸವಿಸವಿದು ನೋಡು ನೀನೆನ್ನಾಣೆ
ಎನಲಲ್ಲಿ ಶಂಕರಂ ಕೈಕೊಂಡ ಮಾಳ್ಕೆಯಿಂ
ತನತನಗೆ ಭೂತಕ್ಕೆ ಕೊಟ್ಟನೊಲ್ದರ್ತಿಯಿಂ
ಆತುರದ ಪ್ರೇಮಮಂ ತಾನೆಯಾರೋಗಿಪಂ
ಭೂತಸಂಕುಲಕೆ ಮಾಂಸವನಿತ್ತು ತಣಿಯಿಪಂ
ಭಕ್ತನ ಮನಕ್ಕೆ ತಾನುಂಡಂತೆ ಮಾಡುತಂ
ಭಕ್ತಿಯಿಂ ತಣಿತಣಿದು ತೇಗಿ ಕೂಗಾಡುತಂ
ಇಂತು ಶಿವನಾರೋಗಿಸಲ್ಕಂಡು ಕಣ್ಣಂದ
ಅಂತಾಗಳೇ ನೋಡಿ ಬಾಡುತ್ತಮಿಂತೆಂದ
ಅಡವಿಯೊಳಗಿನಿತು ದಿನವೊರ್ವನಿರ್ದೈತಂದೆ
ನಡೆ ನೋಡಿ ನೆರೆ ಸಾಗಿಸುವರಿಲ್ಲಲಾ ತಂದೆ
ಪಲವುಪಾಸದೊಳೂಟವಂ ಕಂಡೆ ಎನ್ನವನೆ
ಪಲವು ಮಾತೇನು ಸಲಹಿದಪೆ ನಾ ನಿನ್ನವನೆ
ಎಂದೆನುತ್ತಿರುಳಾಗೆ ಹುಳ್ಳಿ ಹೊರೆಯಂ ತಂದು

ಮುಂದೆ ಹಗ್ಗಿಯನೊಟ್ಟ ಬೆಳಗನೆತ್ತುವೆನೆಂದು
ನಿದ್ದೆಗೆಯ್ತಂದೆ ಇನ್ನಾವ ದುಗುಡಂ ಬೇಡ
ಇದ್ದಪೆಂ ಕಾಹಾಗಿ ಒಂದುಂ ಭಯಂ ಬೇಡ

ಎಂದು ಶಿವನಂ ನಿದ್ರೆಗೈಸಿ ಮೆಲ್ಲನೆ ಬಂದು
ಇಂದು ನಿಂದುಲಿವ ಪಕ್ಷಿಗಳನೆಬ್ಬಿಸುತಂದು
ನಿದ್ದೆಗೆಟ್ಟೊಡೆ ನಾಳೆ ಪಸಿವಿಲ್ಲದೆನ್ನವಂ
ಇದ್ದಂತೆ ಇರ್ಪನೇನುವನುಣ್ಣ ನೆನ್ನವಂ
ಎನುತಲ್ಲಿ ಬಂದ ಮೃಗವಂ ಚಲ್ಲ ಬಡಿವುತುಂ
ವನದ ಪಕ್ಷಿಗಳ ನುಣ್ದನಿಗಳಂ ನಿಲಿಸುತುಂ
ತಿರುಗಿ ಬಂದೊಳಪೊಕ್ಕು ನಿದ್ರೆಯುಮನಾಲಿಸುತೆ
ಇರದೆ ಪೊರಮಟ್ಟು ಮೆಲ್ಲನೆ ಪೊರಗನಾಲಿಸುತೆ
ಒಳಪೊಕ್ಕು ಮತ್ತೆ ಸುಯ್ಯೆಲರನಾಲಿಸುತಂದು
ತಿಳಿಯದಿನ್ನುಂ ಬಳಲಿದಂ ನಿದ್ರೆಗೆಯ್ಯೆಂದು

ಇಂತು ಬೆಳಗಪ್ಪನ್ನೆಗಂ ಜಾಗರಂ ಮಾಡಿ
ಕಂತುಮದಹರನುಪ್ಪವಡಿಸೆ ನಲವಿಂ ನೋಡಿ
ಪಸಿದಯ್ಯ ನಿದ್ರೆ ತಿಳಿದೆಳ್ದಯ್ಯ ಎನ್ನವನೆ
ಪೊಸ ಮಾಂಸಮಂ ತರಲ್ಪೋಪೆನೈ ಎನ್ನವನೆ
ಕಡು ವೇಗದಿಂ ಬಂದಪೆಂ ನೋಡು ನಿನ್ನಾಣೆ
ತಡೆಯೆ ನಾನೊಂದೆಡೆಯೊಳುಂ ನಿಲ್ಲೆ ನಿನ್ನಾಣೆ
ಎನುತ ಸಂತಯಿಸುತುಂ ನೇಹದಿಂ ಪೊರಮಟ್ಟು
ಮನದೊಳಗೆ ದೂರಿಸುತಲೆರಡು ಮೂರಡಿ ಇಟ್ಟು
ತಿರುಗಿ ಬಂದೆನ್ನವನೆಯುಮ್ಮಳಿಸಬೇಡೆಂದು
ಚರಿತದಿಂದೀ ಬರ್ಪೆನೆನ್ನವನೆ ನೋಡೆಂದು
ತೆಗೆದಪ್ಪಿ ಕೊಂಡಾಡಿ ಮುಂಡಾಡಿ ಮುದ್ದಾಡಿ
ಅಗಲಲಾರದೆ ಮತ್ತೆ ಮತ್ತೆ ಹೋಗದೆ ನೋಡಿ
ಏನೆಂಬೆನಾ ಭಕ್ತನುತ್ತಮದ ಸ್ನೇಹವಂ
ಏನೆಂಬೆನಾ ಶಿವನ ಲೀಲೆಯುತ್ಸಾಹಮಂ
ನಡೆನಡೆದು ತಿರುತಿರುಗಿ ಹಿಂಬರಕಿನಿಂ ನಡೆದು
ದಡದಡಿಸಿ ಹೆರಹಿಂಗಲಾರದೆ ಮನಂಬಿಡಿದು



ಎಂತಕ್ಕೆ ಬಂದು ಕಣ್ಮರೆಯಾಗೆ ಕಣ್ಣಂದ
ಅಂತಾಗಳೇ ಕಂದಿ ಕುಂದಿ ಮಿಗೆ ಕಣ್ಣಂದ–
ಅರಸುತ್ತ ಮಿರ್ದನತ್ತಲ್ಕೃಗವನೆಸಲೆಂದು
ಪೊರಮಟ್ಟು ಬಂದನತ್ತಲ್ಪಾರ್ವನೊಲ್ತಂದು

ಪೂಸಿದ ವಿಭೂತಿ ರುದ್ರಾಕ್ಷಿದೋವತಿಯೆಸೆಯೆ
ಬಾಸಣಿಸಿದಗ್ಗವಣೆ ಕೆಯ್ಯ ಕರಡಿಗೆಯೆಸೆಯೆ
ಮೆಲ್ಲಮೆಲ್ಲನೆ ಬೆಟ್ಟವೇರುತಂ ನಡೆತಂದು
ಅಲ್ಲಿ ದೇವಾಲಯದ ಬಾಗಿಲ್ಗೆಯ್ಯೆತಂದು
ಗವುಲೆತ್ತಿ ಕವಿಯೆ ಕರಣಂ ಕರಂ ಕೌರೇಳೆ
ಶಿವಶಿವ ಇದೆಲ್ಲಿಯದ್ಭುತವೆನುತೆ ಹೊಲಸೇಳೆ
ತಿರುಗಿ ಬಂದಗ್ಗಣಿಯನೊಂದು ಟಾವಿನೊಳಿರಿಸಿ
ಕರಡಿಗೆಯನಿರಿಸಿ ಪೇಸುತ್ತುಗುಳಿ ಕೊಕ್ಕರಿಸಿ
ಎಲ್ಲಿಯದು ಬಂದುದು ದುರಾಚಾರವೆಂದೆನುತೆ
ಎಲ್ಲಿಯ ಜುಗುಪ್ಸೆಯಾದುದು ಶಂಕರಂಗೆನುತೆ
ಹೇಸಿ ಮೂಗನೆ ಮುಚ್ಚಿಕೊಳುತವಂ ಐತಂದು
ಆಸುರದ ಪಾಪಕರ್ಮವ ಮಾಡಿದವನೆಂದು
ಸೂನೆಗಾರನನಿಂತು ಪುಗಿಸುವರೆ ಎಲೆ ದೇವ
ಏನಯ್ಯ ಎಲ್ಲಿರ್ದ ಏನಾದೆ ಎಲೆ ದೇವ
ಎಂದೆನುತ ಬೋಹರಿಗೆಯಂ ಕೊಂಡು ಬೋಹರಿಸಿ
ತಂದು ಗೋಮಯವಿಕ್ಕಿ ಹೇವರಿಸಿ ಸಾರಯಿಸಿ
ಕೊಳ್ಳದೊಳು ಪೊಕ್ಕು ಮತ್ತೊಮ್ಮೆಪಾರ್ವಂ ಮಿಂದು
ತಳ್ಳಂಕದಿಂದ ಶಿವಶಿವ ಎನುತ್ತಂ ಬಂದು
ಕರಡಿಗೆಯನಗ್ಗವಣಿಯಂ ಕೊಂಡು ಭರದಿಂದೆ
ಹರನಾಲಯಕ್ಕೆ ಬಂದೊಳಪೊಕ್ಕು ಭಯದಿಂದೆ

ಇಂತು ಮಾಡಿಸುವರೇ ಶುದ್ಧಾತ್ಮಶಿವ ಎನುತೆ
ಇಂತು ಸ್ವೈರಿಸುವರೇ ನಿರ್ಮಳಪ್ರಭುವೆನುತೆ
ಮಜ್ಜನಕ್ಕೆರೆದನಾ ಕಾಳತ್ತಿಯರಸಂಗೆ
ಸಜ್ಜನ ಸ್ನೇಹ ರಸಭರಿತ ಪರಮಾತ್ಮಂಗೆ
ಬೆಲ್ಲವತ್ತಂ ಗರುಗದೆಲೆ ದೊಡ್ಡಿ ಪತ್ರೆಯಂ

ಪಲ್ಲವಿಸುವುತ್ತರಣೆಯಂ ಬಿಳಿಯ ಗರುಕೆಯಂ
ತಂದೊಟ್ಟದಂ ರುದ್ರಸೂಕ್ತಮಂ ಪೇಳುತಂ
ನಿಂದಲ್ಲಿ ಪಲ್ಲವುಂ ಜಪಂಗಳಂ ಮಾಡುತು
ಧೂಪಾರತಿಯನೆತ್ತಿ ನೈವೇದ್ಯಮಂ ಕೊಟ್ಟು
ಕಾಪಾಲಿ ಶರಣೆನುತ್ತಂ ಬಂದು ಪೊಡಮಟ್ಟು
ಪುಗಿಸದಿರು ಕಂಡಯ್ಯ ಪಶುಕರ್ಮಕಾರನಂ
ಪುಗಿಸದಿರು ಹೇಸಿಕೆಯ ಮಾಡುವ ಕಿರಾತನಂ
ಎಂದೆನುತೆ ಪೊಡಮಟ್ಟು ಬಲಗೊಂಡು ಪಟ್ಟಿರ್ದು
ಇಂದುಶೇಖರ ಕರುಣಿಸೆಂದೆನುತೆ ನಿಂದಿರ್ದು
ಸುಖನಾಸಿ ಗರ್ಭಗೃಹದಾ ರಂಗಮಂಟಪದ
ಮುಖದ ಮೂರುಂ ಕದವನಿಕ್ಕುತುಂ ವಿಸ್ತರದ
ಸಂಕಲೆಗಳಂ ಹೂಡಿ ಬಿಯ್ಯಗಂಗಳನಿಕ್ಕಿ
ಶಂಕರಾ ಪುಗಿಸದಿರು ಇನ್ನವನನೆನುತಿಕ್ಕಿ
ಆದುದತ್ತಲು ಬೇಡನಾಟವಂದಾ ವನಕೆ
ಪೊದನತ್ತಲು ಶಿವ ಬ್ರಾಹ್ಮಣಂ ತತ್ಪುರಕೆ

ಹಸಿದನೆನ್ನವನೆಂದು ಮೃಗವನರಸುತೆ ಬಂದು
ಎಸಲೊಲ್ಲದವ್ವಳಿಸಿ ನಿಲ್ಪನದು ಪೊಲ್ಲೆಂದು
ಬಾಡಿದ ಮೃಗಂಗಳಂ ರೋಗಂಗಳುಳ್ಳವಂ
ಬೇಡೆನ್ನವನ ಹೊಟ್ಟೆಗಾಗದೆನುತೆಸನವಂ
ಬಾಳ್ಗೆನ್ನ ಮಾದೇವ ಎನ್ನವನೆ ಎನುತಲ್ಲಿ
ಆಳ್ಗುಣವನವಧಾರು ಎನೊಡೆಯನೆನುತಲ್ಲಿ
ಅಷ್ಟಾಂಗ ಪುಷ್ಟವಾಗಿರ್ದ ಮೃಗವಂ ಕಂಡು
ಅಷ್ಟವೇಷ್ಟಿತನಾಗಿ ಎಚ್ಚಂ ಮನಂಗೊಂಡು
ನೆಲಕೆ ಬೀಳದ ಮುನ್ನ ಪರಿತಂದು ಪಿಡಿದೆತ್ತಿ
ನೆಲನನಿದು ಸೋಂಕೆ ಪೇಸುವನೊಡೆಯನೆನುತೆತ್ತೆ
ಕಲ್ವಾಳೆ ಎಲೆಗೊಯ್ದು ಬೆಳೆದ ಹಸಲೆಯ ಮೇಲೆ
ಚೆಲ್ವಾಗಿ ಇಕ್ಕಿ ಮುಚ್ಚಿದನೊಂದರಿಂ ಮೇಲೆ
ಗಾಳಿತಾಗಿದೊಡೊಲ್ಲನೆನ್ನವಂ ಸುಖಿಯೆನುತೆ
ಬಾಳ ಚೂತದ ಕೆಳಗೆ ತಂದಿರಿಸಿ ಪಸರಿಸುತೆ
ಮುತ್ತುಗದ ತಳ್ತೆಲೆಗಳಂ ಚಂದದಿಂ ಪಾಸಿ



ಬಿತ್ತರಿಸಿ ನವಖಂಡವಂ ಮಾಡುತಂ ಕಾಸಿ
ಉಲುಹಾದಡಂತಂತೆ ಮುಚ್ಚಿ ಮರೆಮಾಡುತುಂ
ನಲಿನಲಿದು ಕಾಸಿ ಪರಿಪಾಕಮಂ ಮಾಡುತಂ
ಕಾಹೇರಿತಿದು ಸೀದುದೆಂದು ಬೇರಿರಿಸುತುಂ
ಆಹಾ ಇದೆನ್ನವಂಗೆಂದು ಮುಚ್ಚಿರಿಸುತುಂ
ಮೃದುವಪ್ಪವಂ ಕಯ್ಗಳಿಂಮುಟ್ಟಿ ಶೋಧಿಸುತೆ
ಒದವಿ ಚೆಲ್ವಪ್ಪವಂ ಕಣ್ಗಳಿಂ ಶೋಧಿಸುತೆ
ಕಂಪುಳ್ಳವಂ ಘ್ರಾಣದಿಂದರಿದು ಶೋಧಿಸುತೆ
ಇಂಪುಳ್ಳವಂ ಜಿಹ್ವೆಯಿಂದರಿದು ಶೋಧಿಸುತೆ
ಎಂಜಲೆಂಬವರ ಬರಿ ಜಿಹ್ವೆಯಂ ಹುಸಿಮಾಡಿ
ಸಂಜನಿತ ಕರಣಂಗಳಿಂದೆ ಶೋಧಿಸಿ ನೋಡಿ
ಸುಖಮುಖದ ಕಳಶದೊಳಗಗ್ಗಣಿಯನಾದರಿಸಿ
ನಖದಿಂದೆ ಕಾಡುಮೊಲ್ಲೆಯ ಹೂವನಳವಡಿಸಿ
ಉತ್ತಮಾಂಗದ ಕರಡಿಗೆಯೊಳಿರಿಸುತಂತಲ್ಲಿ
ಉತ್ತಮೋತ್ತಮ ಭಕ್ತನಳ್ಕರಿಂ ಬರುತಲ್ಲಿ
ಒಂದು ಕಯ್ಯೊಳ್ಮಿಸಲೋಗರಮುಮಂ ಪಿಡಿದು
ಒಂದು ಕಯ್ಯೊಳ್ಬಿಲ್ಲು ಬಾಣಂಗಳಂ ಪಿಡಿದು
ಮೊಗದಗ್ಗವಣಿ ಶಿರದ ಕರಡಿಗೆಯ ಪೂವೊಪ್ಪೆ
ಮೃಗದ ಮಾಂಸದ ನವಸ್ನೇಹದೋಗರವೊಪ್ಪೆ
ಬರುತೆನ್ನವಂ ಪಸಿದನಿರಲಾರನೆನ್ನವಂ
ಪಿರಿದು ತಳ್ವಿದನೆಂದು ಕೋಪಿಸುವನೆನ್ನವಂ
ಹೊತ್ತು ಹೋಯ್ತೆಂದೆನ್ನ ಬರವನೆಳಸಿರ್ಪನೋ
ಹೊತ್ತುಗಳೆದೆಂ ಪಾಪಿಯಾದೆನೆಂತಿರ್ಪನೋ
ಮಿಗೆ ಪಸಿದು ನಿಲಲಾರದಿದಿರಾಗಿ ಬರ್ಪನೋ
ಮಗನ ಬರವಂ ಕಾಣದೊಬ್ಬನೈತರ್ಪನೋ
ಪುಲಿ ಬಂದೊಡಂಜಿ ಪೊರಮಡಲಮ್ಮದಿರ್ಪನೋ
ಉಲಿವ ಪಕ್ಷಿಗಳ ದನಿಗೇಳ್ದು ಸುರದಿರ್ಪನೋ
ಕರಡಿ ಗರ್ಜಿಸಲಂಜಿಯುಸುರಿಕ್ಕದಿರ್ಪನೋ
ಉರಗ ಸಾರಲು ಹೆದರಿ ಹೆಂಪಳಿವುತಿರ್ಪನೋ
ಬರವುಗಾಣದೆಯೊರ್ವನೇಯಲಸುತಿರ್ಪನೋ
ಪರಮನ ಸಮೀಪಕ್ಕೆ ಈ ಪೊಳ್ತು ಪೋಪೆನೋ

ತಮ್ಮವರ ನೆನೆದೆನ್ನ ಬಿಟ್ಟನೆಂದಳುವನೋ
ದಮ್ಮಾನದಿಂದೆನ್ನ ಕೂಡೆ ಮುನಿದಿಪ್ಪನೋ

ಎಂದು ನೇಹದ ಚಿಂತೆಯಿಂ ಚಿಂತಿಸುತ ಬರಲು
ಮುಂದೆ ದೇವಾಲಯದ ಬಾಗಿಲುಗಳಿಕ್ಕಿರಲು
ಎನ್ನವನೆ ತೆರೆ ಕದವನೆಂದು ನುಡಿವುದರಿಂದ
ಮುನ್ನವೇ ಢಣ ಢಣನೆ ತೆರೆಯೆ ಚಚ್ಚರದಿಂದ
ತೆರೆಯೆ ಬಂದೊಳಪೊಕ್ಕು ಒರ್ಬನಿರ್ದೈ ತಂದೆ
ಎನುತೆ ಪಾದುಕ ಪದದಿ ಪೂಜೆಯಂ ಪರಿಹರಿಸಿ
ಅನುನಯದಿ ಮೊಗದಗ್ಗವಣಿಯೆರೆದು ಸಡಗರಿಸಿ
ಮುಡಿಯೊಳಿರ್ದರಳೊಳೊಯ್ಯನೆ ಪೂಜೆಯಂ ಮಾಡಿ
ಕಡು ನೇಹದಿಂದೆ ಪಸಿದೈ ಪಸಿದೆ ಎನೆ ನೋಡಿ
ನೇಹದೋಗರಮುಮಂ ತಂದಲ್ಲಿ ಮುಂದಿರಿಸಿ
ಓಹೋ ಹೋ ಹೊತ್ತು ಹೋಯಿತ್ತೆನುತಲಾದರಿಸಿ
ಎನ್ನವನೆ ಎನ್ನವನೆ ಪಸಿದಯ್ಯ ಪಸಿದಯ್ಯ
ಎನ್ನವನೆ ಚೆನ್ನವನೆ ಹೊತ್ತು ಹೋದುದೆ ಅಯ್ಯ
ಉಣ್ಣವನೆಯುಣ್ಣವನೆಯೆನ್ನವನೆನ್ನಯ್ಯ
ಬಣ್ಣಿಸುತ ಬಣ್ಣಿಸುತ ಉಣ್ಣವನೆ ದಮ್ಮಯ್ಯ
ಅರಿದೆನರಿದೆಂ ನಾಚಿ ಇರ್ದಪ್ಪೆ ನೀನೆಂದು
ಅರಿದಂತೆ ಹಿಂದು ಮುಂದಾಗಿ ನೋಡುವೆನೆಂದು
ಇರಲೀಶನೆಂದಿನಂದದಲುಂಡ ಮಾಳ್ಕೆಯಿಂ
ಪರಿಹರಿಸಿ ಭೂತಕ್ಕೆ ಕೊಟ್ಟನೊಲ್ದಳ್ತಿಯಿಂ

ಆರೋಗಿಸಲ್ತಿರುಗಿ ನೋಡೆ ಹರುಷಂದಳೆದು
ಹಾರಯಿಸಿ ದಳವೇರಿ ತೆರೆಯನತ್ತತ್ತೆಳೆದು
ದಿಟ್ಟಿಯಾದಪುದೆಂದು ನೋಡಿ 'ಥೂ ಥೂ' ಎಂದು
ಕಟ್ಟಳ್ಕರಿಂದೆ ನೇಹದ ಕಾಹನಿಟ್ಟಂದು
ಲಿಂಗ ಪ್ರಸಾದಮಂ ಕೈಕೊಂಡು ಸವಿಸವಿದು
ಹಿಂಗದಾ ಸವಿಗೆ ಹಾರಯಿಸುತಂ ಮನಮೊಸೆದು
ಉಂಡನೆನ್ನಣ್ಣಿಮಂ ಬಾಳ್ದೆ ನಾಂ ಬದುಕಿದೆಂ
ಉಂಡನಿಂದೆನ್ನವಂ ಬದುಕೆದೆಂ ಬದುಕಿದೆಂ



ಇನ್ನಿದೇ ಬೇಂಟಿಯಾಡಿಯೆ ತರ್ಪನೆಂದೆನುತೆ
ಇನ್ನೆನಗಸಾಧ್ಯಮಪ್ಪುದಿದೊಂದುಮಿಲ್ಲೆನುತೆ
ಒಡೆಯನಂ ನೋಡುತಂ ಭುಜವನಪ್ಪಳಿಗೊಂಡು
ಕಡು ಮೋಹವೆತ್ತಿಕ್ಕಿ ಯಾಡಲ್ಮನಂಗೊಡು

ಬಾಗುತಂ ಕೈ ಚಪ್ಪಳಿಕ್ಕುತಂ ಬೀಗುತುಂ
ತೂಗುತುಂ ತೊನೆವುತೊಂದೇ ಕಾಲೊಳಾಡುತುಂ
ಉಬುಬೆಂದು ಬೊಬ್ಬಿಟ್ಟು ಕೋ ಎಂದು ಕೂಗಿಟ್ಟು
ಅಬುಬೆಂದು ನಿಂದಾರ್ದು ನಾಲ್ದೆಸೆಗೆ ಕೊಣಕಿಟ್ಟು
ಉಡುವಣಿಗಳಲ್ಲಾಡೆ ಮುಡುಹಿಕ್ಕಿ ಕೆಲೆದಾಡಿ
ಪಿಡಿದಲಗನೆತ್ತಿ ಕುಣಿಕುಣಿದೊನೆದು ಕುಣಿದಾಡಿ
ಪರಿತಂದು ಬಿಗಿಯಪ್ಪಿಯೆಯ್ದಿಸದೆ ಬಿಸುಸುಯ್ದು
ನೆರೆವ ತವಕದಿ ವಿರಹವೇರಿ ತನ್ನಂ ಬಯ್ದು
ಮತ್ತೆ ಮತ್ತೆಳ್ದಾಡಿ ಒಲೆದಾಡಿ ಮಲೆದಾಡಿ
ಚಿತ್ತವೆಂತಿರ್ದುದಂತಭವನೊಳಗೋಲಾಡಿ
ಕರಡಿಯಂದದೆ ಕುಪ್ಪಿ ಕುಪ್ಪಿ ಕೆಲಕೆಲದಾಡಿ
ಉರವಣಿಸಿ ಹುಲ್ಲೆ ಗುಂತಿಕ್ಕಿ ನೆಗೆನಗೆದಾಡಿ
ಬಾಯಿಂದೆ ಕೊಂಬು ಮೌರಿಯ ಕಹಳೆಗಳನೂದಿ
ಬಾಯಿಂದೆ ಕರಡೆಯಂ ಬಾಜಿಸುತೆ ಕೊಳಲೂದಿ
ಎನ್ನವನೆ ನೋಡೆಂದು ಎತ್ತಿಕ್ಕಿಯಾಡುತುಂ
ಚೆನ್ನವನೆ ನೋಡೆಂದು ಸಿಳ್ಳಿಕ್ಕಿಯಾಡುತುಂ
ಮುಂದೆ ತುರುಬಂ ಕಟ್ಟಿ ದುಮ್ಮಿ ಸಲೆಯಾಡುತುಂ
ಚಂದ ಚಂದದ ಬೇಡರಾಟಮಂ ತೋರುತುಂ
ಆಡಲರಿಯದೆ ಕಾಲ್ಗೆ ಬಂದಂತೆಯಾಡುತುಂ
ಪಾಡಲರಿಯದೆ ಎನ್ನವನೆ ಎಂದು ಪಾಡುತುಂ
ಬೆರಕೆ ಇಲ್ಲದ ಬಚ್ಚ ಬರಿಯ ಭಕ್ತಿಯೊಳಾಡಿ
ನೆರವಿಲ್ಲದೇಕಾಂತ ಶಾಂತ ಭಕ್ತಿಯೊಳಾಡಿ
ಇಂತು ಬೆಳಗಪ್ಪನ್ನೆಗಂ ಜಾಗರಂ ಮಾಡಿ
ಕಂತುಮದಹರನ ಕಡು ಮೋಹದೊಳಗೋಲಾಡಿ
ನಡೆತಂದು ಶಂಕರನನಮರ್ದಪ್ಪಿ ಕೊಂಡಾಡಿ
ಒಡೆಯನೇ ಬೇಂಟೆಯಾಡಲ್ಪೋಪೆನೆಂದಾಡಿ

ನಿನ್ನಿನಂತಲ್ಲ ತಳುವೆಂ ತಳುವೆರ್ನೆನ್ನವನೆ
ನಿನ್ನ ಮೇಲಾಣೆ ಬೇಗದಿ ಬರ್ಪೆನೆನ್ನವನೆ
ಎಂದಗಲಲಾರ ನಿಲಲಾರ ಪಸಿದಹನೆಂದು
ಮುಂದುಗೆಟ್ಟೊಂದುವಂ ನುಡಿಯಲಂಜುವನೆಂದು
ಕಣ್ದೆರೆದು ನೋಡಲಮ್ಮಂ ದಿಟ್ಟಯಕ್ಕೆಂದು
ನುಣ್ದನಿಯೊಳಲ್ಲದುಸುರಂ ಮಂಡೆ ನೋಗೆಂದು
ನಡೆವನೊಂದಡಿಯಿಡುವನಗಲಲಾರದೆ ನಿಲ್ವ
ಒಡೆಯನಂ ನೋಡಿ ಕಣ್ಬಿಡಲಾರದೆಯಳಲ್ವ
ಜುಮ್ಮನೆ ಬೆಮರ್ತು ದಡದಡಿಸಿ ಗದ್ಗದಿಸುವಂ
ಜೊಮ್ಮಿಡುತ್ತೆನ್ನವನೆ ಎಂದು ದಡದಡಿಸುವಂ
ತಿರುಗಿ ನೋಡುತ್ತಲ್ಲಿ ಮರೆಯಾಗೆ ಬೆಚ್ಚುವಂ
ಪರಿಹರಿಸಿ ನೆರೆ ನೋಡಿ ನೋಡಿ ಮೆಯ್ವೆಚ್ಚುವಂ
ನಡೆಯತ್ತ ಕಾಲಿತ್ತಲೇನೆಂಬೆನಾತನಂ
ಒಡಲತ್ತ ಮನವಿತ್ತಲೇನೆಂಬೆನಾತನಂ
ನೋಟವತ್ತಲ್ಕಣ್ಗಳಿತ್ತಲಿಂತಿದು ಪೊಸತು
ಮಾಟವತ್ತಲು ಕೂಟವಿತ್ತಲಿಂತಿದು ಪೊಸೆತು
ದಿನದಿನಕೆ ಗಳಿಗೆಗಳಿಗೆಗೆ ನೇಹವೇರುತುಂ
ತನುಮನಕೆ ತನುಕಣ್ಗೆ ಪೊಸತು ಪಲ್ಲವಿಸುತುಂ
ಪೋದನೆಂತಕ್ಕೆ ಬೇಂಟೆಗೆ ತಾನೆ ಕಣ್ಣಂದ
ಆದರಂ ಮಿಗೆ ಪೋದನತ್ತಲಾ ಕಣ್ಣಂದ

ಇತ್ತಲು ಶಿವಬ್ರಾಹ್ಮಣಂ ಮುನ್ನಿನಂದದಿಂ
ಹೊತ್ತ ಕೊಡನಗ್ಗವಣಿ ಹೊಪತ್ರೆಯೊಪ್ಪದಿಂ
ಮೆರೆವ ದೇವಾಲಯದ ಬಾಗಿಲ್ಗೆ ನಡೆತರಲು
ಹೊರಗೆ ಮುನ್ನಿಂದೆ ನಾಲ್ವಡಿ ಕುಸುರಿದರಿದಿರಲು
ಕಂಡೊಳಗೆ ಪುಗದೆ ಹೇಸುತ್ತೆ ಸಿಡಿಮಿಡಿಗೊಂಡು
ಬೆಂಡಾಗಿ ಬೇಳಾಗಿ ನೋಡಿ ಕೊಳ್ಳುದಿಗೊಂಡು
ಹೊತ್ತಗ್ಗವಣೆವೆರಸಿ ಬೆರಗಾಗಿ ನಿಂದಲ್ಲಿ
ಎತ್ತ ಹೋದೈ ಶಿವನೆ ನಿನ್ನ ಹೊಲಬಿಲಿಲ್ಲ.
ಇಂತು ಮಾಡಿಸುವರೇ ಕಾಳತ್ತಿಯರಸನೇ
ಇಂತಪ್ಪನಾಚಾರವಳ್ತಿಯೇನರಸನೇ



ಪ್ರಾಣಿಯಂ ಕೊಲಲೀವುದಿದು ಧರ್ಮವೇ ದೇವ
ಕಾಣನೇ ಅಡವಿಯೊಳ್ತೆರಹಿಲ್ಲವೇ ದೇವ
ಬಂದೀ ಮರುಳ್ತನಕ್ಕೆಂತರ್ಚಿಪೆಂ ದೇವ
ಇಂದು ಮೊದಲಾಗಿ ಬಾರೆಂ ಸುಳಿಯೆನೆಲೆ ದೇವ
ಕೊಲ್ವೆನವನಂ ಬಳಿಕ ಬಂದರ್ಚಿಪೆಂ ನೋಡ
ಸಾಲ್ವೆನೆನ್ನಯ ಪ್ರಾಣಮುಮನವಂಗೆಲೆ ನೋಡ
ಎಂದಿತ್ತ ಬೇರಿಳಿಪಿಯಗ್ಗವಣಿ ಪತ್ರೆಯಂ
ತಂದೊಂದರಿಂದುಡುಗಿ ದುರ್ಗಂಧದಿಕ್ಕೆಯಂ
ಸಾರೈಸಿ ಮಿಂದು ಮತ್ತಗ್ಗವಣಿಯಂ ಕೊಂಡು
ದೂರಿಸುತೆ ಚಿತ್ತದೊಳು ಚಿಂತೆಯಂ ಕೈಕೊಂಡು
ಬಂದು ಮಜ್ಜನಕೆರೆದು ದೇವಂಗೆ ಕೋಪಿಸುತೆ
ಎಂದುಮಿಂತೀ ದುರಾಚಾರವಿಲ್ಲೆಂದೆನುತೆ
ಪತ್ರೆಯಿಂ ಪುಷ್ಪದಿಂ ಪೂಜೆಯಂ ಮಾಡುತುಂ
ಚಿತ್ತಜಹರಂಗೆ ಧೂಪಾರತಿಯನೆತ್ತುತುಂ
ಆರೋಗಿಸಲ್ಕಿತ್ತು ಕದವನಿಕ್ಕುತ್ತಲ್ಲಿ
ಮಾರಾರಿ ಮೆಚ್ಚಲವನಂ ಕೊಲ್ವೆನೆನುತಲ್ಲಿ
ಪೊರಮಟ್ಟು ಪೋದನತ್ತಲ್ ಶಿವಬ್ರಾಹ್ಮಣಂ
ತೆರನರಿದು ಶಬರನಂ ಮರ್ದಿಸುವ ಕಾರಣಂ

ಇತ್ತಲಾ ಪಾರ್ವತಿ ಶಿವಂಗೆ ಬಿನ್ನಯಿಸಿದಳು
ಉತ್ತಮೋತ್ತಮ ಶಿವಾಚಾರೆ ಬಿನ್ನಯಿಸಿದಳು
ದೇವ ತಿಳಿಯದು ನಿಮ್ಮ ಮಾಟವೆನಗೀಶ್ವರಾ
ಭಾವಿಸಲ್ಬೇರೊಂದು ಪರಿ ನೋಡೆ ಶಂಕರಾ
ಬೇಡನ ಚರಿತ್ರಮೀ ಧರಣಿಗೆ ವಿರುದ್ಧವಿದು
ನೋಡೆ ನಿಮ್ಮಡಿಗಳ್ಗೆ ಮಿಗೆ ಸೈರಿಸಿರ್ದಪುದು
ಮುಕ್ಕಳಿಸಿದುದಕದಿಂ ಮಜ್ಜನಕೆರೆದರುಂಟೆ
ಅಕ್ಕಕ್ಕು ಮುಡಿದ ಹೂವಿಂ ಪೂಜಿಸಿದರುಂಟೆ
ಬರಿಮಾಂಸವಲ್ಲದರಮೇಲೆಂಜಲಿಂತುಂಟೆ
ಕರಿಗೊರಲ ನೀನೊಲ್ದಡೆನಲಮ್ಮೆ ಇಂತುಂಟೆ
ಕಾಲಿಂದೆ ಪೂಜೆಯಂ ಶಿವಶಿವಾ ಎನಲಮ್ಮೆ
ಈ ಲೋಕದೊಳಗಿಲ್ಲ ನೀನೊಲ್ದಡೆನಲಮ್ಮೆ

ಇಂತಪ್ಪ ಬೇಡಂಗೆ ಮುಯ್ಯಾನುವರೆ ದೇವ
ಮುಂತೆ ಇದಿರಾಗಿ ಕದವಂ ತೆರೆವರೇ ದೇವ
ಹುಟ್ಟಿದಂದಿಂ ವಿಭೂತಿಯನಿಟ್ಟು ಬಲ್ಲನೇ
ಹುಟ್ಟಿದಂದಿಂ ಶಿವಶಿವಾ ಎಂದು ಬಲ್ಲನೆ
ಎನ್ನವನೆ ಎನ್ನವನೆ ಎಂಬುದಿದು ಮಂತ್ರಮೇ
ತನ್ನಯ ವಿನೋದಂ ಶಿವಾರ್ಚನೆಗೆ ತಂತ್ರಮೇ
ಮಿಂದು ಭಸಿತವನಿಟ್ಟು ರುದ್ರಾಕ್ಷಿಯಂ ಧರಿಸಿ
ಬಂದು ಹೂವಂ ಕೊಯ್ವುತಗ್ಗಣಿಯನಾದರಿಸಿ
ತಂದು ಮಜ್ಜನಕೆರೆದು ಶಿವಪೂಜೆಯಂ ಮಾಡಿ
ನಿಂದು ಧೂಪಾರತಿಯನೆತ್ತಿ ನಲವಿಂ ನೋಡಿ
ಉಪಹಾರವೀವುತಂ ನಮಸ್ಕಾರವಂ ಮಾಡಿ
ಜಪ ತಪ ಧ್ಯಾನ ಪ್ರದಕ್ಷಿಣಂಗಳ ಮಾಡಿ
ಪೂಜಿಸುವ ಪಾರ್ವಂಗೆ ಬಾಯ್ಮಿಡುಕದಿರ್ದಪಿರಿ
ಓಜೆಗೆಟ್ಟಾ ಲುಬ್ಧಕಂಗೆ ಕರುಣಿಸಿದಪಿರಿ
ಎಂದುಂ ಪ್ರದಕ್ಷಿಣಂ ಬಂದವಂ ಬಲ್ಲನೇ
ಎಂದುಂ ನಮಸ್ಕಾರವಂ ಮಾಡಿ ಬಲ್ಲನೇ
ಅದು ಮಾಣ್ಗೆ ಕೈಯೆತ್ತಿ ಪೊಡಮಟ್ಟು ಬಲ್ಲನೇ
ಮುದದಿಂದವಂ ಸ್ತೋತ್ರವಂ ಮಾಡಿ ಬಲ್ಲನೇ
ಆವ ಪರಿಯಿಂದೊಲ್ದಿರಭವ ನೀವಾತಂಗೆ
ಹೇವವಿಲ್ಲದ ದುಶ್ಚರಿತ್ರದ ಕಿರಾತಂಗೆ

ಎನೆ ವಿರೂಪಾಕ್ಷನಾ ಮಾತಿಂಗೆ ನಸುನಗುತೆ
ನಿನಗೆ ಪೇಳ್ದಪೆನಗಜೆ ತಿಳಿಯೆ ಕೇಳೆಂದೆನುತೆ
ಪಾರ್ವನಗ್ಗವಣಿ ತಿಳಿಮನ ಕದಡು ಎಲೆ ಗೌರಿ
ಪಾರ್ವನರ್ಚನೆ ಇನಿದು ಮನವತಿ ವಿಷಂ ಗೌರಿ
ಅವನಿಟ್ಟ ಭಸಿತವವನಂ ಮುಟ್ಟದೆಲೆ ಗೌರಿ
ಅವನ ರುದ್ರಾಕ್ಷಿಯವನಂ ಪೊರ್ದದೆಲೆ ಗೌರಿ
ಬಾಯಮಂತ್ರಂ ಮನದ ಕ್ಷುದ್ರತಂತ್ರ ಸೂಸೆ
ಕಾಯವೇಷಂ ಮನದ ಭವಿತನವದೇಂ ಲೇಸೆ
ಎನ್ನನರ್ಚಿಸಿ ಭವಿಗೆ ಕಯ್ಯಾನುವರೆ ದೇವಿ
ಎನ್ನಂ ಪೊಗಳುತನ್ಯರಂ ಪೊಗಳ್ವರೇ ದೇವಿ



ಸತ್ಯವಲ್ಲದೆ ಪೂಜೆ ಸಸಿನವಪ್ಪುದೆ ಗೌರಿ
ನಿತ್ಯವಿಲ್ಲದ ಹಾಡು ಸೊಗಸಪ್ಪುದೇ ಗೌರಿ
ಮನವಿಲ್ಲದವ ಮುಟ್ಟೆ ಬಡಿವಡೆದ ತೆರನೆನಗೆ
ಮನವುಳ್ಳವಂ ಬಡಿಯೆ ಪೂಜಿಸಿದ ತೆರನೆನಗೆ
ಅರಿಯಾ ಗಿರಿಜೆ ಮುನ್ನ ಕಲ್ಲಿಂದಲಿಟ್ಟುದಂ
ಅರಿಯಾ ಗಿರಿಜೆ ಮುನ್ನ ಬಾಗಿಲವ ಕಾಯ್ದುದಂ
ಅರಿಯಾ ಮಹಾದೇವಿಯಂಬಲಿಯನುಂಡುದಂ
ಅರಿಯಾ ಮಹಾದೇವಿಯುರುಳುತ್ತ ಪೋದುದಂ
ಎನ್ನ ಭಕ್ತರ್ಗೆ ಬರಿಬೋಧೆಯುಂಟೇ ಗೌರಿ
ಎನ್ನಭಕ್ತರ್ಗೆಯುಪಚಾರಮುಂಟೇ ಗೌರಿ
ಪೂಜೆಯವರೊಂದು ದೆಸೆ ನಿಷ್ಠೆಯವರೊಂದು ದೆಸೆ
ಓಜೆಯವರೊಂದು ದೆಸೆ ಒಲುಮೆಯವರೊಂದು ದೆಸೆ
ಓದಿನವರೊಂದು ದೆಸೆ ಸಾಧುಳ್ಳರೊಂದು ದೆಸೆ
ವೇಧಿಸುವರೊಂದು ದೆಸೆ ಸಾಧಿಸುವರೊಂದು ದೆಸೆ
ಭಕ್ತಿಯವರೊಂದು ದೆಸೆ ಮುಕ್ತಿಯವರೊಂದು ದೆಸೆ
ಯುಕ್ತಿಯವರೊಂದು ದೆಸೆ ಶಕ್ತಿಯವರೊಂದು ದೆಸೆ
ಕೇಳಾ ಗಿರಿಜೆ ನೀನೆ ಎನ್ನ ಭಕ್ತನನೆಂದೆ
ಕೇಳಾ ಗಿರಿಜೆ ಬೇಡನೆಂದೆನ್ನ ಮುಂದೆಂದೆ

ಬೇಡನವನಿಂದ್ರ ರವಿ ಚಂದ್ರಾದಿ ಪದವಿಯಂ
ಬೇಡನವನಜಹರಿಗಳೆಳಸಿರ್ಪ ಪದವಿಯಂ
ಎನ್ನನಲ್ಲದೆ ಹಾಡನೆನ್ನನಲ್ಲದೆ ಬೇಡ
ಎನ್ನನಲ್ಲದೆ ನೋಡನೆನ್ನನಲ್ಲದೆ ಕೂಡ
ಆತಂಗೆಯಾನುಮೆನಗಾತನೆ ಪರಮ ಬಂಧು
ಮಾತೇನು ಅವನೆನಗೆ ನೂತನ ಸುಧಾಸಿಂಧು
ಅವನ ಕಯ್ಯೊಳ್ಪೊಲಸು ಮನದೊಳಮೃತಂ ಗೌರಿ
ಅವನ ಮೊಖದೊಳು ಜಲಂ ಮನದೊಳಗ್ಗಣಿ ಗೌರಿ
ಅವನ ಮಂಡೆಯ ಹೂವು ಮನದ ಪರಿಮಳವೆನಗೆ
ಅವನ ಕಾಲಾಟವತಿ ನೇಹದರ್ಚನೆಯೆನಗೆ
ಎನ್ನವನೆ ಎಂಬ ಸಲುಗೆಯ ನುಡಿಯೆ ಮಂತ್ರವದು
ಎನ್ನದೇ ಕೂರ್ತು ಮಾಡುವುದು ಶಿವತಂತ್ರವದು

ತೋರಿದಪೆನೊಚ್ಚಿ ಸೈರಿಸು ಎನ್ನ ಭಕ್ತನಂ
ತೋರಿದಪೆನೀಗಳೆ ನೀಂ ಪೊಗಳ್ವ ಪಾರ್ವನಂ

ಎನುತಮಿರಲೇಳನೆಯ ದಿವಸದೊಳ್ಮನವುಕ್ಕಿ
ಮನದೊಳ್ಕಿವ ಬ್ರಾಹ್ಮಣಂ ಕೋಪಮುಮನಿಕ್ಕಿ
ಹರನಿಳಯದೊಳ್ಪೊಲಸು ಮಾಡುವ ಕಿರಾತನಂ
ಆವರಿಸದಿಂದು ಕೊಲ್ವೆ ಮೂರ್ಖ ಬೇಡನಂ
ಎಂದು ಮಸೆಯಿಸಿದನೊಂದಂದದ ಕಠಾರಿಯಂ
ಮಂದಮತಿ ತನ್ನ ಜಡಬುದ್ಧಿಗನುಸಾರಿಯಂ
ಕೊಂಡುಬಂದಲ್ಲಿ ಕಾಳತ್ತಿಶಿಖರವನೇರಿ
ತೊಂಡ ಬೇಡನು ಇಂತು ಮಾಡುವನೆ ಎನುತೇರಿ
ನಡೆತಂದು ದೇವಾಲಯದ ಮುಂದೆ ನಿಲಲಲ್ಲಿ
ಮೃಡನಿತ್ತ ನೆನೆದನದ್ಭುತದುಪಾಯವನಲ್ಲಿ
ಶಿವಲಿಂಗದೊಳಗೆರಡು ಕಣ್ಗಳಾಕಾರಮಂ
ಶಿವನಿರಿಸಿದಂ ಪರೀಕಿಸಲ್ಕೆಂದು ಚಿತ್ತಮಂ
ಆಲಿಯೊಂದೊಡೆದಂತೆ ನೆತ್ತರೊಸರುತ್ತಿರುಲ್
ಮೆಲ್ಲಮೆಲ್ಲನೆ ಶಿವಬ್ರಾಹ್ಮಣಂ ನಡೆತರಲ್
ಕಾಣುತೆ ನಮಃಶಿವಾಯೆಂತಿದದ್ಭುತಮೆಂದು
ಮಾಣದಂಜುತ್ತ ಭಯಗೊಂಡು ತಾ ನೊಂದಂದು
ಅರಸಿಂಗೆ ಕೇಡಿತ್ತೊ ದೇಶಕ್ಕೆ ಪೊಲ್ಲದೋ
ಹರನೆ ಬಲ್ಲಂ ಮಹೋತ್ಪಾತವೇನಪ್ಪುದೋ
ಎಂದು ವಿಪ್ರಂ ನೋಡಲಮ್ಮದೆ ಮನಂಗುಂದಿ
ಬಂದು ಪಟ್ಟಣಕೆ ಪೇಳ್ದಂ ಕೌತುಕದೊಳೊಂದಿ
ಕೇಳ್ದು ಜನವೆಯ್ತಂದು ಕಾಣುತಲಸಾಧ್ಯಮಂ
ತಾಳ್ದು ನೋಡಲ್ಕಂಜಿಯೋಡುತ್ತ ಚೋದ್ಯಮಂ
ಅತ್ತಲಾ ಪುರಜನಂ ಪೋಗಿ ತಮ್ಮೂರೊಳಗೆ
ಮತ್ತೆ ಮತ್ತತಿ ಭಯಂಗೊಳುತಿರಲ್ಮನದೊಳಗೆ

ಇತ್ತಲಾ ಕಣ್ಣಂದನೊಲ್ದು ಬೇಂಟೆಯನಾಡಿ
ಹೊತ್ತ ಹೂ ಮೊಗದಗ್ಗವಣಿಯೋಗರಂಗೂಡಿ
ನಡೆತರುತೆ ಪೊತ್ತು ಪೋಯ್ತೆನ್ನವಂ ಪಸಿದನೋ



ಕಡು ವೇಗದಿಂ ಬಾರನೆಂದು ಕೋಪಿಸುವನೋ
ಎಂದುವಿಲ್ಲದ ಮನಕೆ ಮರುಕವೇಕಪ್ಪುದೋ
ಇಂದು ಮನಕಿಂತಪ್ಪುದೇಕಾಗುತಿಪ್ಪುದೋ
ಪಸಿದಿರ್ದೊಡೇಕೆ ಬಿಟ್ಟಾನೇಕೆ ಬಂದೆನೋ
ವಶವಿಲ್ಲದೀ ಬೇಂಟೆಯೊಳಗೇಕೆ ಸಂದೆನೋ
ಮೃಗ ಕುಲಂಗಳ್ಕೂಡಿ ಹೆದರಿಸುತಲಿರ್ಪವೋ
ಖಗಕುಲಂಗಳ್ಕೊಡಿಯಂಜಿಸುತಲಿರ್ಪವೋ
ಬರಬರಲ್ಕೆಡದ ಭುಜಕಣ್ಣುರ್ಬುಗಳ್ಕೆತ್ತೆ
ಬರುತಿರ್ದನುರವಣಿಸಿ ತನ್ನ ಮನ ಭಯವೆತ್ತೆ
ಚಿಂತಿಸುತೆ ದೂರಿಸುತೆ ಎಂತಿರ್ಪನೋ ಎನುತೆ
ಅಂತಸ್ಥದೊಳು ಬೆದಬೆದಂ ಬೇವುತಂ ಬರುತೆ

ಬರೆ ಮುಂದೆ ಶಿವಲಿಂಗದೊಂದು ಕಣ್ಣೊಡೆದಿರಲ್
ಪರಿದಿಳಿವ ನೆತ್ತರೋರಂತೆಯೊಸರುತ್ತಿರಲ್
ಕಂಡು ಕಣ್ಗೆಟ್ಟು ಬಾಯ್ಬಿಟ್ಟು ಕಲ್ಮರನಾಗಿ
ಕಂಡು ಮುಂಗೆಟ್ಟು ಮತಿಗೆಟ್ಟು ಬಾಳ್ವೆಣನಾಗಿ
ಬಿಲ್ಲಂ ಬಿಸುಟು ಕಳೆದು ಮಾಂಸಗಳಂ ಚೆಲ್ಲಿ
ತಲ್ಲಣಿಸುತಗ್ಗಣಿಯನುಗುಳಿ ಪೂವಂ ಚೆಲ್ಲಿ
ತಲೆಯುಮಂ ಕಣ್ಣುಮಂ ಹೊಯ್ದು ಕೊಳುತೆಯ್ತಂದು
ಎಲೆ ತಂದೆ ಎನ್ನವನೆ ಏನಾದುದೈ ಎಂದು
ಹತ್ತೆ ಸಾರ್ದೈದಿ ಕಣ್ಣೊಡೆದಿರ್ದುದಂ ಕಂಡು
ನೆತ್ತರೋರಂತೊಸರುತಿರ್ಪಂದಮಂ ಕಂಡು

ಕೆಟ್ಟೆ ನಾಂ ಕೆಟ್ಟೆ ನಾಂ ಬೆಂದೆ ನಾಂ ಬೆಂದೆ ನಾಂ
ದಿಟ್ಟಿಯಿಂತೇಕಾಯ್ತು ನೊಂದೆ ನಾನುರಿದೆ ನಾಂ
ಎನ್ನೊಡೆಯನೇನು ಸೈರಿಸಲಾರ್ಪನೇಯಿದಕೆ
ಮುನ್ನವೇ ಮುಂದುದೋರಿತ್ತು ಪಾಪಿಯ ಮನಕೆ
ಎನ್ನೊಡೆಯ ಕಣ್ಣೊಡೆಯೆ ನೋಡುತಿರಲಾರ್ಪನೇ
ಎನ್ನವನ ಸಾರ್ದಿರದೆ ಅಗಲ್ದಾನೆ ಕೆಟ್ಟನೇ
ಪರಮಾಣುವೇಕೆ ಮೇರುವಿನ ಸಖ್ಯಮದೇಕೆ
ಸರಸಿಯೇತಕೆ ಮಹಾರ್ಣವದ ಸಖತನವೇಕೆ

ಎನಗೇಕೆ ಸಾರ್ದೆಯಾಂ ಸಾಗಿಸುವೊಡೆನ್ನಳವೆ
ಎನಗೇಕೆಯಾಳ್ತನಂ ಬೆಸಕೆಯ್ಯಲೆನ್ನಳವೆ
ಅನೇಕೆ ನೀನೇಕೆ ಪಾಪಿಯೆನಗಪ್ಪುದೇ
ಆನಿರೆ ಮಹಾದೇವ ನಿನಗೆ ಇಂತಪ್ಪುದೇ

ಎಂದಲ್ಲಿ ರಂಗಮಂಟಪದಲ್ಲಿ ಪೊರಳುತಂ
ಮುಂದಗೆಟ್ಟರಿವುಗೆಟ್ಟಲ್ಲಲ್ಲಿ ಪೊರಳುತುಂ
ಎಂತಕ್ಕೆ ಸಂತೈಸಿಕೊಂಡು ಮೆಲ್ಲನೆ ಬಂದು
ಮುಂತೆ ಕುಳ್ಳಿರ್ದು ಮರುಗುತ್ತೆ ಬಳಲುತ್ತಂದು
ಎನ್ನಯ್ಯ ಏನಾದುದೆನಗೆ ಹೇಳೈ ತಂದೆ
ಎನ್ನಯ್ಯ ಕಣ್ಣವೇದನೆ ವಿರಿದಲಾ ತಂದೆ
ಮೃಗವೊರಸಿಕೊಳಲೊತ್ತಿ ಕೋಡಮೊನೆ ನೆಟ್ಟುದೋ
ಅಗಲ್ದ ಪಾಪಿಯನೆನ್ನನಿಂತಿರಿದು ಸುಟ್ಟುದೋ
ಎಂದುಟ್ಟ ಸೀರೆಯಿಂದೂದುತ್ತೆಯೊತ್ತುತ್ತೆ
ಕೆಂದಳಿರ್ಗಳಿಂದೊತ್ತಿ ನೋಡುತ್ತೆ ಬಾಡುತ್ತೆ

ಹಾ ಕಂಡೆನೊಂದುಪಾಯವನರಿದೆನಿದಕೆಂದು
ಈ ಕಣ್ಗೆ ಎನ್ನ ಕಣ್ಣಿತ್ತು ನೋಡವೆನೆಂದು
ಆಗದೊಡೆ ತಲೆಯನಂದೊಪ್ಪಿಸುವೆನಿದಕೆಂದು
ಬೇಗದಿಂದಸುವನೊಪ್ಪಿಸುವೆನೆನುತಂ ನಿಂದು
ಬೋಳೆಯಂಬಂ ತೆಗೆದು ಮನದಂದು ಶಂಕಿಸದೆ
ಕಾಳತ್ತಿಯರಸನೇ ನೋಡೆಂದು ಚಿಂತಿಸದೆ
ಶಂಕಿಸದೆ ಹೆಡ್ಡಯಿಸದರವರಿಸದೊಳಗೊತ್ತಿ
ಭೋಂಕೆನಲ್ಮೀಂಟಿಯೊಡೆದಿರ್ದ ಕಣ್ಣೊಳಗೊತ್ತಿ
ನೋಡೆ ತೊಳತೊಳಗಿ ಥಳಥಳಿಸಿ ಬೆಳಬೆಳಗುತಿರೆ
ನೋಡಿ ಕಣ್ಣಿಂದನಾನಂದಮಯನಾಗುತಿರೆ
ತೊಟ್ಟಿನಾ ಲಿಂಗದೊಳ್ಮತ್ತೊಂದು ಕಣ್ಣೊಸರೆ
ಕಟ್ಟಾಳ್ನಿರೀಕ್ಷಿಸುತೆ ಕಲಿಯಾಗಿ ತಾನರರೆ
ಇನ್ನಂಜೆನಿನ್ನಂಜೆನಿನ್ನೊಂದು ಕಣ್ಣುಂಟು
ಎನ್ನವನೆ ಎನ್ನವನೆ ಬಳಿಕ ನೀನೆನಗುಂಟು
ಎಂದೆನುತ ಸದ್ಭಕ್ತಿ ಕುಶಲನಾನಂದದಿಂ



ಇಂದು ಶೇಖರನೊಡೆದ ಕಣ್ಣೋಯದಂದದಿಂ
ಉಂಗುಟದೊಳೊತ್ತಿ ಕಣ್ಗುರುಹ ಮಾಡುತ್ತಲ್ಲಿ
ಮುಂಗುಡಿಸಿ ತನ್ನ ಮತ್ತೊಂದು ಕಣ್ದೆಗೆದಲ್ಲಿ
ಗಣಪದವಿಯಂ ಬಯಸಿಯೊಲ್ದು ಕಣ್ಣಿಡುವಂತೆ
ತ್ರಿಣಯನಂ ಭಕ್ತಿಯಿಂ ಕಣ್ದೆರೆದು ನೋಳ್ಪಂತೆ
ತಂದುಂಗುಟದ ಕುರುಹಿನಿಂದಲ್ಲಿ ಕಣ್ಗೊಳಿಸಿ
ಇಂದುಧರನಿನ್ನಿರಲ್ಬಾರದೆನುತಂಕುರಿಸಿ
ಶಿವಲಿಂಗದಿಂ ಶಿವನ ಹಸ್ತವುದ್ಭವಿಸುತ್ತೆ
ಶಿವನಲ್ಲಿ ಕಣ್ಣಪ್ಪನೆಸೆವ ಕೈವಿಡಿದೆತ್ತೆ

ಪೂಮಳೆಗಳೆರಗಿ ದುಂದುಭಿ ಕುಲಂಗಳ್ಮೊಳಗೆ
ಕಾಮಹರ ದಶಭುಜಂ ಪಂಚವದನಂ ತೊಳಗೆ
ನಂದೀಶ ವೀರಭದ್ರಾದಿ ಗಣ ಸಮಿತಿ ಬರೆ
ಇಂದ್ರಾದಿ ದೇವರ್ಕಳೆಲ್ಲರುಂ ಬರುತಮಿರೆ
ಕಂಡಾ ಗಿರಿಜೆ ಎನ್ನ ನೇಹದಸುವಪ್ಪನಂ
ಇಂತಪ್ಪ ಭಕ್ತನಂ ಕೇಳ್ದು ಬಲ್ಲಾ ಗಿರಿಜೆ
ಎಂದು ಕಣ್ಣಪ್ಪನಂ ನೋಡಿ ಕೊಂಡಾಡುತುಂ
ಸಂದಣಿಪ ಪುಳಕದಿಂದಪ್ಪಿ ಕೊಂಡಾಡುತುಂ
ಭಾಪುರೇ ಕಣ್ಣಪ್ಪ ಪೊತುರೇ ಕಣ್ಣಪ್ಪ
ಭಾಪು ಮಝುಭಾಪು ಮಝುಪೊತುರೆ ಕಣ್ಣಪ್ಪ
ಎಲ್ಲರ್ಗೆ ಕಣ್ಣನಾನೀವೆನಂತದ ಮಾಣ್ದು
ಇಲ್ಲಿ ಇಂತೆನಗೆ ಕಣ್ಣಿತ್ತೆ ಭಕ್ತಿಗೆ ಪೂಣ್ದು
ಎನಗೆ ಕಣ್ಣುಂ ನೀನೆ ಎನಗೆ ಪುಣ್ಯಂ ನೀನೆ
ಎನಗೆ ಪುತ್ರಂ ನೀನೆ ಎನಗೆ ಮಿತ್ರಂ ನೀನೆ
ನಿನ್ನ ಪಡಿಸಣದ ಪಡಿಸಣವೆ ನೋಡಿತ್ತೆನಗೆ
ನಿನ್ನ ಮೊಗದಗ್ಗವಣಿಯೇ ಅಗ್ಗವಣಿ ಎನಗೆ
ನಡೆ ವಿಮಾನವನೇರಿಕೊಳ್ಳು ಕಣ್ಣಂದ ಎನೆ
ನುಡಿದು ಬಿನ್ನೈಸಿದಂ ಸುರರೆಲ್ಲ ಚೋದ್ಯಮೆನೆ
ದೇವಬೆಸಸಲ್ವೇಳ್ಕು ತನುವೆರಸಿ ಬರ್ಪನೇ
ಭಾವಿಪೊಡೆ ಈ ದೇಹವೆರಸಿ ಬರಲಾರ್ಪನೇ
ಎನಲೊಂದು ದೇಹವಿಲ್ಲಿಗೆ ಮೆರೆಯುತಿರ್ಕೆಂದು

ಮನಮೊಸೆವುತೊಂದು ನಿರ್ಮಳ ದೇಹಮಂ ತಂದು
ಕಣ್ಣಪ್ಪನಂ ಪುಗಿಸಿ ಸರ್ವ ಸಂಭ್ರಮದಿಂದೆ
ಕಣ್ಣಿತ್ತನಂ ವಿಮಾನದೊಳಿರಿಸಿ ನಲವಿಂದೆ
ನೆಗೆದನೀಶ್ವರನಂದು ಕೈಲಾಸಪುರದತ್ತ
ಬಗೆಯೊಳಾನಂದ ಪುಳಕಂಗಳಂ ಧರಿಸುತ್ತ
ಬಂದು ಕೈಲಾಸಮಂ ಪೊಕ್ಕು ಸಂತೋಷದಿಂ
ನಿಂದು ಭದ್ರಾಸನದೊಳೊಪ್ಪುತ ವಿಳಾಸದಿಂ
ಕಣ್ಣಪ್ಪನಂ ಕರೆದು ಗಣಪದವಿಯಂ ಕೊಟ್ಟು
ಬಣ್ಣವಣ್ಣಿಗೆ ಪೊಸ ಬೀಳುಡೆಗಳಂಕೊಟ್ಟು
ಭಕ್ತರ ಸುಖಂ ತನ್ನ ಸುಖವೆನಿಸುವೀಶ್ವರಂ
ಭಕ್ತರ ಮುಖಂ ತನ್ನ ಮುಖವೆನಿಸುವೀಶ್ವರಂ
ಭಕ್ತ ಜೀವಂ ತನ್ನ ಜೀವವೆನಿಸುವ ಶಿವಂ
ಭಕ್ತಕಾಯಂ ತನ್ನ ಕಾಯವೆನಿಸುವ ಶಿವಂ
ತನ್ನ ಗಣಸಂಕುಳಕೆ ಹೇಳುತುಂ ಹಿಗ್ಗುತುಂ
ತನ್ನಾಪ್ತ ಗಣದೊಳಗೆ ಸಲಿಸಿ ಕೊಂಡಾಡುತುಂ

ದೇವಗಣಸಂಕುಳದೊಳಪ್ರತಿಮನೊಪ್ಪಿದಂ
ದೇವಗಣ ನಿವಹದೊಳಗಿಂದುಧರನೊಪ್ಪಿದಂ
ಕಮಳನಯನಾಕ್ಷಪೂಜಿತಪಾದನೊಪ್ಪಿದಂ
ಕಮಲಭವ ಪಂಚತಿರವಿಚ್ಛೇದನೊಪ್ಪಿದಂ
ಅಮಮ ಪುರಮಥನನಘವನದಾವನೊಪ್ಪಿದಂ
ವಿಮಲಚಿದ್ಘನನಧ್ವರಧ್ವಂಸಿಯೊಪ್ಪಿದಂ
ಅಮಮತ್ರೈಲೋಕ್ಯರಕ್ಷಾದಕ್ಷನೊಪ್ಪಿದಂ
ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ ॥ ಮೂರುಂ ಕಣ್ಣುಂಟದರಿಂ
ಬೇರಿತ್ತಲು ನಿನಗೆ ಭಕ್ತಿನಯನಮನಿತ್ತಂ
ಮಾರೋದೆಂ ಕಣ್ಣಪ್ಪಗೆ
ನೀರನೇ ಕರುಣಿಪುದು ಹಂಪೆಯ ವಿರೂಪಾಕ್ಷಾ.



## ಶಬ್ದಾರ್ಥ

ಕಣ್ಣಪ್ಪನು=ಕಣ್+ಅಪ್ಪನು, ಕಣ್ಣಾಗುವವನು. ದರ್ಪಕ=ಕಾಯ, ಮನ್ಮಥ; ಪ್ರಹಾರಿ=ಹೊಡೆಯುವವನು, ನಾಶಮಾಡುವವನು; ಎಸೆವ=ಶೋಭಿಸುವ; ಶಬರ=ಬೇಡ; ಪುಳಿಂದ=ಬೇಡ, ಕಿರಾತ; ಕಾರಣಿಕ=ಕಾರಣ ಪುರುಷ ದೈವಾಂಶಸಂಭೂತ, ಅವತಾರ ಪುರುಷ; ಆರಯ್ಯೆ=ವಿಚಾರಮಾಡಿ ನೋಡಿದರೆ, ಚಿಂತಿಸು; ಜಂಜುದಲೆ=ಸಿಕ್ಕುಸಿಕ್ಕಾದ ಕೂದಲು; ಗುಂಜಾಭರಣ=ಗುಲಗಂಜಿ, ಕವಡೆಗಳ ಒಡವೆ; ಎದೆಗುಪ್ಪಸ=ಎದೆಯ ಮೇಲೆ ಬರುವಂತೆ ಹಾಕಿಕೊಂಡ ಅಂಗಿ, ಎದೆಕವಚ; ಕವಡಿಕೆ=ಕವಡೆ; ದಂಡೆ=ಮಾಲೆ; ಅಲಗು=ಕತ್ತಿ; ನೆಗಹಿ=ಮೇಲೆತ್ತಿ; ನೆತ್ತಿಗನ್ನಡಿ=ನೆತ್ತಿಯಲ್ಲಿ ಕಾಣುವಂತೆ ಕಟ್ಟಿಕೊಳ್ಳುವ ಕನ್ನಡಿ; ಪಂಚಾಕ್ಷರಿ= ನಮಃಶಿವಾಯ ಎಂಬ ಮಂತ್ರ; ಗುಲ್ಮ=ಪೊದೆ; ತೋಹು=ತೋಪು, ಮರಗಳ ಗುಂಪು; ವನ್ಯ ಮೃಗಗಳನ್ನು ಬೇಟೆಯಾಡುವ ಸ್ಥಳ; ಸೋಹು=ಪ್ರಾಣಿಗಳನ್ನು ಅವು ಅಡಗಿಕೊಂಡಿರುವ ಸ್ಥಳದಿಂದ ಎಬ್ಬಿಸಿ ಬೇಟೆಯಾಡುವ ಸ್ಥಳ; ಕುನಿದು=ಬಗ್ಗಿ; ಕುಬುಜಿಸಿ=ಚಿಕ್ಕದಾಗಿಸಿ; ಚರಿತದಿಂ=ನಡಿಗೆಯಿಂದ; ಕಾಬಳತೆ=ಕಣ್ಣಿಗೆ ಕಾಣುವಷ್ಟು ದೂರ; ಹೋಬಳಿ=ಹೋಗುವಷ್ಟು ದೂರ; ಅವಚಿತ=ಭಕ್ತಿ; ಉರವಣಿಸಿ=ಉತ್ಸಾಹದಿಂದ; ಸುಂಟಗೆಗೋಲು=ಪ್ರಾಣಿಯ ಮಾಂಸವನ್ನು ಬೆಂಕಿಯಲ್ಲಿ ಹದವಾಗಿ ಬೇಯಿಸಲು ಉಪಯೋಗಿಸುವ ಕೋಲು; ಖಂಡ=ಮಾಂಸದ ತುಂಡು; ಹೆಂಪುಳ್ಳ=ಸವಿಯಾದ, ದೊಡ್ಡದಾದ; ನುಂಪುಳ್ಳ=ನಣ್ಣಗಿರುವ; ಪ್ರತಿಪಾಕ=ಪ್ರತ್ಯೇಕ ಅಡುಗೆ; ತೆಳುಗಂಡ=ತೆಳುವಾದ ಮಾಂಸಖಂಡ; ಮುತ್ತುಗ=ಅಗಲವಾದ ಎಲೆ ಬಿಡುವ ಒಂದು ಬಗೆಯ ಮರ; ಪುತ್ತಳೆ=ಎಲೆ; ಬಾಸಣಿಸಿ=ಮುಚ್ಚಿ; ಪಚ್ಚಡಿಸು=ಅಣಿಮಾಡಿ, ಸಿದ್ಧಪಡಿಸಿ; ಭೂತ=ಶಿವಗಣಗಳು; ಆರೋಗಿಪಂ= ಊಟ ಮಾಡುವವನು; ರಾಗಿಪಂ=ಖುಷಿಪಡುವನ; ಕಾಹಾಗಿ=ಕಾವಲಾಗಿ; ಜಾಗರ=ಎಚ್ಚರವಾಗಿರುವುದು; ಉಪ್ಪವಡಿಸು=ನಿದ್ರೆಯಿಂದ ಎಚ್ಚರಗೊಳ್ಳು; ಪೂಸಿಸದ=ಬಳಿದುಕೊಂಡ; ಧೋವತಿ=ಪಂಚೆ; ಬಾಸಣಿಸು=ಮುಚ್ಚಿಕೊಂಡು; ಅಗ್ಘವಣಿ=ಅಭಿಷೇಕಕ್ಕೆ ಉಪಯೋಗಿಸುವ ಮಡಿ ನೀರು; ಕರಡಗೆ=ಪೂಜಾಸಾಮಗ್ರಿಗಳಿರುವ ಪೆಟ್ಟಿಗೆ;ಗವಲು=ಕೆಟ್ಟವಾಸನೆ; ಕರಣ=ಇಂದ್ರಿಯ; ಕೌರೇಳೆ=ಸುಟ್ಟುಹೋಗಲು; ಕೊಕ್ಕರಿಸಿ=ಅಸಹ್ಯಪಟ್ಟು; ಗರಗದೆಲೆ=ಸುವಾಸನೆಯ ಎಲೆ; ದೊಡ್ಡಿ=ಒಂದು ಬಗೆಯ ಔಷದಿ ಸಸ್ಯ; ಪಲ್ಲವಿಸು=ಹರಡು, ರುದ್ರ ಸೂಕ್ತಿ=ಶಿವನನ್ನು ಪೂಜಿಸುವಾಗ ಹೇಳುವ ಮಂತ್ರ; ಪಶುಕರ್ಮಕಾರ=ದನಕಾಯುವವನು; ಪ್ರಾಣಿಗಳನ್ನು ತಿನ್ನುವವನು; ಬಿಯ್ಯ=ಬೀಗ; ಗಂಗಳ=ಊಟದ ತಟ್ಟೆ, ನೀರು ತುಂಬುವ ದುಂಡನೆಯ ಲೋಹದ ಪಾತ್ರೆ; ಅಷ್ಟಾಂಗಪುಷ್ಟ=ಮೈಯೆಲ್ಲ ದಪ್ಪನಾಗಿದ್ದ; ಅಷ್ಟವೇಷ್ಟಿತ=ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ;

ಎಚ್ಚಂ=ಹೊಡೆದ; ಕಲುವಾಳೆ=ಕಾಡುಬಾಳೆ; ಹಸಲೆ=ಎಳೆಯ ಹುಲ್ಲು, ಹಸಿರು ಹುಲ್ಲು; ಬಾಳಚೂತ=ಎಳೆಮಾವು; ಪಸರಿಸು=ಹರಡು; ತಳ್ತಲೆ=ಚಿಗುರೆಲೆ; ನವಖಂಡ=ಹಸಿಮಾಂಸದ ತುಂಡು; ಉಲುಹಾದೊಡೆ=ಧ್ವನಿ ಕೇಳಿದರೆ; ಪದಪಾಕ=ಹದವಾಗಿ ಬೇಯಿಸುವುದು; ಘ್ರಾಣ=ಮೂಗು; ಮೀಸಲೋಗರ= ಬಳಸದೆ ಪ್ರತ್ಯೇಕವಾಗಿ ತೆಗೆದಿರಿಸಿದ ಅನ್ನ; ಪಿರಿದು ತಳುವಿದ=ಬಹಳ ತಡಮಾಡಿದ; ದಳವೇರುತ=ಉತ್ಸಾಹಗೊಳ್ಳುತ್ತ; ಕೊಣಕಿಟ್ಟು=ನೆಗದು; ಕುಪ್ಪಿ=ಕುಪ್ಪಳಿಸಿ; ಹುಲ್ಲೆಗೊಂತಿಕ್ಕೆ=ಹುಲೆಯಂತೆ ನೆಗೆದಾಡಿ; ಮಾವುರಿ=ತುತ್ತೂರಿ; ಕುಸುರಿದರಿ=ತುಂಡು ತುಂಡು ಮಾಡು, ಕೊಚ್ಚು; ಬೇಳಾಗಿ=ಬೆಪ್ಪಾಗಿ; ದೂರಿಸು=ಚಿಂತಿಸು; ಮಾಟ=ರೀತಿ; ಮುಯ್ಯಾನುವರೆ=ಮರುಳಾಗುವರೆ; ಓಜೆಗೆಟ್ಟ=ಕ್ರಮ ತಪ್ಪಿದ; ಲುಬ್ಧಕ=ಬೇಡ, ಬೇಟೆಗಾರ; ಸಸಿನ=ನೇರವಾದದ್ದು, ಸರಿಯಾದದ್ದು; ಬೋಧೆ=ಅರಿವು,ತಿಳುವಳಿಕೆ, ವಿಚಾರ; ಉತ್ಪಾತ=ಭೂಕಂಪ; ಕೆತ್ತೆ=ಹಾರಲು; ಬೋಳೆಯಂಬು=ಹರಿತವಾದ ಬಾಣ; ಹೆಡ್ಡೈಸದೆ=ಹಿಮ್ಮೆಟ್ಟದೆ; ಆರವರಿಸದೆ=ಉಪೇಕ್ಷಿಸದೆ; ಉಂಗುಟ=ಅಂಗುಷ್ಟ, ಪಾದದ ಹೆಬ್ಬೆರಳು.

## ಕವಿ ಪರಿಚಯ

ಕನ್ನಡ ಸಾಹಿತ್ಯದ ಶಿರೋರತ್ನಗಳಲ್ಲಿ ಒಬ್ಬನಾದ ಮಹಾಕವಿ ಹರಿಹರ ಅದರ ದಿಕ್ಕುದೆಸೆಗಳನ್ನು ಬದಲಿಸಿದ ಕ್ರಾಂತಿಕವಿ. ಸಾವವರ ಮೇಲೆ ಮನುಜರ ಮೇಲೆ, ಕನಿಷ್ಠರ ಮೇಲೆ ಕಾವ್ಯರಚನೆ ಮಾಡದೆ, ಶಿವಶರಣರನ್ನು ಕುರಿತು ರಗಳೆ ಛಂದಸ್ಸಿನಲ್ಲಿ ಕಾವ್ಯ ರಚಿಸಿ ಅದನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡ ಸಮರ್ಥಕವಿ. ಈತನ ಕಾಲ ಬಹುಮಟ್ಟಿಗೆ ೧೩ನೇ ಶತಮಾನದ ಪೂರ್ವಭಾಗ. ಈತನಿಗೆ ಹರೀಶ್ವರ, ಹರಿಯಣ್ಣ, ಹಂಪೆಯ ಹರಿಹರ ಮೊದಲಾದ ಹೆಸರುಗಳುಂಟು. ಈತನ ಜೀವನಕ್ಷೇತ್ರ ಹಾಗೂ ಕಾವ್ಯಕ್ಷೇತ್ರ ಹಂಪೆ. ಇಷ್ಟದೈವ ಹಂಪೆಯ ವಿರೂಪಾಕ್ಷ. ಗುರು ಹಂಪೆಯ ಮಾಯಿದೇವ. ದೋರಸಮುದ್ರದಲ್ಲಿ ನರಸಿಂಹಬಲ್ಲಾಳನ ಆಸ್ಥಾನದಲ್ಲಿ ಕೆಲವು ಕಾಲ ಕರಣಿಕನಾಗಿದ್ದು, ಅನಂತರ ಹಂಪೆಗೆ ಬಂದು ಅಲ್ಲಿ ವಿರೂಪಾಕ್ಷನ ಅರ್ಚನೆ ಹಾಗೂ ಕಾವ್ಯ ರಚನೆಗಳಲ್ಲಿ ಹರಿಹರನು ತಲ್ಲೀನನಾದಂತೆ ತೋರುತ್ತದೆ. ಹಂಪೆಯ ವಿರೂಪಾಕ್ಷನಲ್ಲಿ ಹರಿಹರನಿಗಿದ್ದ ಅನನ್ಯ ಭಕ್ತಿಯೇ ಅವನ ಕಾವ್ಯದ ಸಲೆ ಮತ್ತು ನೆಲೆ. ಅವನು ಜೀವನವನ್ನೇ ಕಾವ್ಯವಾಗಿಸಿಕೊಂಡ ಮಹಾನುಭಾವ. ಪ್ರಧಾನವಾಗಿ ಆತ ಭಾವುಕ ಕವಿ. ರೂಢಮೂಲವಾದ ಚಂಪೂ ಪರಂಪರೆಯಿಂದ ಬಿಡಿಸಿಕೊಂಡು ರಗಳೆ ಸಂಪ್ರದಾಯದ ಪ್ರವರ್ತಕನಾದುದು ಅವನ ವ್ಯಕ್ತಿವಿಶಿಷ್ಟತೆಯನ್ನು ಸಾರುತ್ತದೆ. ಆತನು ವಸ್ತು, ಭಾಷೆ, ರೂಪಗಳಲ್ಲಿ ಕ್ರಾಂತಿ ಮಾರ್ಗವೊಂದನ್ನು ತೆರೆದು ಪ್ರಸಿದ್ಧನಾದವನು. ಹಿಂದಿನವರಂತೆ ರಾಮಾಯಣ,



ಮಹಾಭಾರತ, ಪುರಾಣಾದಿಗಳಿಗೆ ಶರಣಾಗದೆ ಹತ್ತಿರದಲ್ಲೂ ದೂರದಲ್ಲೂ ಇದ್ದ ಶಿವಶರಣರ ಜೀವನವನ್ನು ವಸ್ತುವಾಗಿ ಆರಿಸಿಕೊಂಡದ್ದು ಹೊಸ ದೃಷ್ಟಿಗೆ ಸಾಕ್ಷಿಯಾಗಿದೆ. ಗಿರಿಜಾ ಕಲ್ಯಾಣ, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ ಮತ್ತು ಶಿವಶರಣರ ರಗಳೆಗಳು– ಹರಿಹರನ ಕೃತಿಗಳು. ಅವನು ೧೦೬ ರಗಳೆಗಳನ್ನು ಬರೆದ್ದಾನೆಂಬುದು ಬಹುಮಂದಿ ವಿದ್ವಾಂಸರ, ಸಂಶೋಧಕರ ಅಭಿಮತವಾಗಿದೆ.

**ಪ್ರಶ್ನೆಗಳು :**

೧. ಬೇಡರ ಕಣ್ಣಪ್ಪನ ಮುಗ್ಧಭಕ್ತಿಯನ್ನು ಕುರಿತು ವಿವರಿಸಿ.

೨. ನಿರ್ಮಲ ಮನಸ್ಸಿನ ಭಕ್ತಿ ಹಾಗೂ ಡಾಂಭಿಕ ಭಕ್ತಿಗಳು 'ಬೇಡರ ಕಣ್ಣಪ್ಪನ ರಗಳೆ'ಯಲ್ಲಿ ಹೇಗೆ ಪರಿಚಯಿಸಲಾಗಿದೆ?

೩. ಶಿವನಿಗೆ ನೈವೇದ್ಯವನ್ನು ಸಮರ್ಪಿಸುವ ಸಂದರ್ಭದ ಭಕ್ತಿಯ ಸಂಭ್ರಮವನ್ನು ವಿವರಿಸಿ.

೪. ಭಕ್ತಿರಸದ ಪ್ರವಾಹವನು ಪರಾಕಾಷ್ಠೆಯ ಉತ್ತುಂಗಕ್ಕೆ ಹರಿಯುವುದನ್ನೂ ಹರಿಹರನ ರಗಳೆಯ ಹಿನ್ನಲೆಯಲ್ಲಿ ವಿವರಿಸಿ.

*